Karnataka State Financial Corporation

# ಕೆಎಸ್‌ಎಫ್‌ಸಿ ವಾರ್ತೆ
# KSFC NEWS

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ 62 ಸಂಭ್ರಮ 1959-2021


ಏಪ್ರಿಲ್ – ಸೆಪ್ಟೆಂಬರ್ 2021 APRIL - SEPTEMBER 2021





ದಿ. 30.01.2021 ರಂದು ಅಂದಿನ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ.ಬಿ.ಎಸ್.ಯಡಿಯೂರಪ್ಪನವರು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ವಜ್ರಮಹೋತ್ಸವದ ಸುಸಂದರ್ಭದಲ್ಲಿ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು.

KSFC Bhavana, #1/1, Thimmaiah Road, Bengaluru - 560 052.
Ph : +91-080-22263322 | Fax : +91-080-22250126
e-mail : bdcr@ksfc.co | www.ksfc.karnataka.gov.in

# KSFC Operational Performance During Financial Year 2020 - 21




# Segmentwise Loan Sanctions During Financial Year 2020-21



Vol. 43 APRIL 2021 - SEPTEMBER 2021 Issue No. 01

# ಸಂಪಾದಕೀಯ............

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ದೇಶದಲ್ಲಿ ಮುಂಚೂಣಿಯಲ್ಲಿ ಕಾರ್ಯ ನಿರ್ವಹಿಸುತ್ತ ಇರುವ ಒಂದು ಪ್ರಮುಖ ಹಣಕಾಸು ಸಂಸ್ಥೆ. ಕರ್ನಾಟಕ ರಾಜ್ಯದಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳನ್ನು ಸ್ಥಾಪಿಸಲು ಮತ್ತು ಧೀರ್ಘಕಾಲ ಅವಧಿಸಾಲ ಸೌಲಭ್ಯಗಳನ್ನು ಪೂರೈಸುವ ಉದ್ದೇಶದಿಂದ 1959 ರಲ್ಲಿ ಸ್ಥಾಪಿಸಲಾಗಿದೆ.

ಪ್ರಸ್ತುತ, ಸಂಸ್ಥೆಯು ರಾಜ್ಯದಲ್ಲಿ ಸಾಮಾಜಿಕ, ಆರ್ಥಿಕ ಬದಲಾವಣೆಯ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತ ರಾಜ್ಯದಲ್ಲಿ ಆರ್ಥಿಕ ಮತ್ತು ಕೈಗಾರಿಕಾ ಬೆಳವಣಿಗೆಗೆ ಸೂಕ್ಷ್ಮ ಹಾಗೂ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳ ಸ್ಥಾಪನೆಗೆ ಆದ್ಯತೆ ನೀಡುತ್ತ, ರಾಜ್ಯದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ.

ಸಂಸ್ಥೆಯು 2020–21ರ ಆರ್ಥಿಕ ವರ್ಷದಲ್ಲಿ ವಿವಿಧ ಸಾಲ ಯೋಜನೆಗಳ ಮೂಲಕ 401.66 ಕೋಟಿ ರೂ.ಗಳ ಸಾಲದ ಮಂಜೂರಾತಿ ಮಾಡಿದ್ದು, ಇದರಲ್ಲಿ ರೂ. 375.77 ಕೋಟಿಗಳ ಮೊತ್ತದ ಮಂಜೂರಾತಿಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಗಾತ್ರದ ಘಟಕಗಳಿಗೆ ಒಳಗೊಂಡಿರುತ್ತದೆ. 432.96 ಕೋಟಿ ರೂ.ಗಳ ಸಾಲ ವಿತರಿಸಿ, ಒಟ್ಟು 638.68 ಕೋಟಿ ರೂ.ಗಳ ವಸೂಲಾತಿ ಮಾಡಲಾಗಿದೆ. ಕೋವಿಡ್–19 ಸಾಂಕ್ರಾಮಿಕ ಪರಿಸ್ಥಿತಿಯಲ್ಲಿಯೂ ಸಂಸ್ಥೆಯು ಹಿಂದಿನ ವರ್ಷಕ್ಕಿಂತ ಪ್ರಸಕ್ತ ವರ್ಷದಲ್ಲಿ 18.45 ಕೋಟಿ ರೂ.ಗಳ ಹೆಚ್ಚಿನ ಬಡ್ಡಿ ವಸೂಲಾತಿಯನ್ನು ಮಾಡಲಾಗಿದೆ. ಹಿಂದಿನ ಆರ್ಥಿಕ ವರ್ಷದಲ್ಲಿದ್ದ ಶೇ: 9.58ರಷ್ಟು ಒಟ್ಟು ಅನುತ್ಪಾದಕ ಆಸ್ತಿಯು ಪ್ರಸಕ್ತ ವರ್ಷದಲ್ಲಿ ಶೇ: 6.42ಕ್ಕೆ ಇಳಿದಿದೆ. ಹಾಗೆಯೇ ಕಳೆದ ವರ್ಷ ಶೇ: 5.12ರಷ್ಟು ಇದ್ದ ನಿವ್ವಳ ಅನುತ್ಪಾದಕ ಆಸ್ತಿಯು ಪ್ರಸಕ್ತ ವರ್ಷದಲ್ಲಿ ಶೇ:5.09 ಕ್ಕೆ ಇಳಿದಿದೆ. ಸಂಸ್ಥೆಯು ಸ್ಥಾಪಿತ ದಿನದಿಂದ 31–03–2021 ರವರೆಗೂ ಸಂಸ್ಥೆಯ ಸಂಚಿತ ಮಂಜೂರಾತಿಯು 1,74,662 ಘಟಕಗಳಿಗೆ 18,286.38 ಕೋಟಿ ರೂ.ಗಳಷ್ಟಾಗಿರುತ್ತದೆ. ಸದರಿ ವರ್ಷದಲ್ಲಿ ಸಂಸ್ಥೆಯು 42.90 ಕೋಟಿ ರೂ.ಗಳಷ್ಟು ನಿವ್ವಳ ಲಾಭ ಗಳಿಸಿದೆ.

ಸಂಸ್ಥೆಯು ಸ್ಥಾಪಿತ ದಿನದಿಂದ ಇಲ್ಲಿಯವರೆಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 21,892 ಉದ್ಯಮಿಗಳಿಗೆ 2,266.13 ಕೋಟಿ ರೂ.ಗಳಿಗೂ ಅಧಿಕ ಸಾಲಗಳ ಮಂಜೂರಾತಿ ನೆರವನ್ನು ನೀಡಿರುತ್ತದೆ. ಸಂಸ್ಥೆಯು ಆರಂಭದಿಂದ ಇಲ್ಲಿಯವರೆಗೂ 31,069 ಕ್ಕೂ ಹೆಚ್ಚಿನ ಮಹಿಳಾ ಉದ್ಯಮಿದಾರರಿಗೆ 4,368.47 ಕೋಟಿ ರೂ.ಗಳ ಸಾಲ ಮಂಜೂರಾತಿ ಮಾಡಿದೆ. ಹಿಂದುಳಿದ ಹಾಗೂ ಅಲ್ಪ ಸಂಖ್ಯಾತ 41,157 ಉದ್ಯಮಿಗಳಿಗೂ ಇಲ್ಲಿಯವರೆಗೆ 1,790.00 ಕೋಟಿ ರೂ.ಗಳ ಸಾಲ ಮಂಜೂರಾತಿ ನೆರವನ್ನು ಒದಗಿಸಿದೆ.

ಸಂಸ್ಥೆಯ 62ನೇ ವಾರ್ಷಿಕ ಮಹಾ ಸಭೆಯು 27ನೇ ಜುಲೈ 2021 ರಂದು ಅಯೋಜಿಸಲಾಗಿತ್ತು, ಈ ಸಂಧರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರು ಮಾಡಿದ ಭಾಷಣದ ವಿವರವನ್ನು ಈ ಸಂಚಿಕೆಯಲ್ಲಿ ಮುದ್ರಿಸಲಾಗಿದೆ.

ಸಂಸ್ಥೆಯು ವಜ್ರ ಮಹೋತ್ಸವವನ್ನು ವಿಧಾನ ಸೌಧದ ಬಾಂಕ್ವೆಟ್‌ಹಾಲ್ ಸಂಭಾಗಣದಲ್ಲಿ ಅಯೋಜಿಸಲಾಗಿತ್ತು. ಈ ಸುಸಂಧರ್ಭದ ವರದಿಯ ವಿವರ ಈ ಸಂಚಿಕೆಯಲ್ಲಿ ಲಭ್ಯವಿದೆ.

Cosidici ರಾಷ್ಟ್ರೀಯ ಪ್ರಶಸ್ತಿಗಳನ್ನು ಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಅತ್ಯುತ್ತಮ ಮತ್ತು ಯೋಗ್ಯವಾದ ಕಾರ್ಯಕ್ಷಮತೆಯನ್ನು ಗುರುತಿಸಲು ಸ್ಥಾಪಿಸಲಾಗಿದೆ. Cosidici ಪ್ರಶಸ್ತಿಯನ್ನು ಉದ್ಯಮಿಗಳ ನಡುವೆ ಸ್ಪರ್ಧೆಯ ಮನೋಬಲವನ್ನು ಉತ್ತೇಜಿಸುತ್ತದೆ ಮತ್ತು ಸಾಮಾಜಿಕ ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಗಳ ವಿಶಿಷ್ಟ ಪಾತ್ರವನ್ನು ಪ್ರೋತ್ಸಾಹಿಸುತ್ತದೆ. ಯಶಸ್ವಿ ಉದ್ಯಮಗಳನ್ನು ಸ್ಥಾಪಿಸುವ ಮೂಲಕ ನಮ್ಮ ದೇಶದ ಅಭಿವೃದ್ದಿಗೆ ಕಾರಣರಾದ ಉದ್ಯಮಿಗಳನ್ನು ಗೌರವಿಸಲು ಈ ಪ್ರಶಸ್ತಿಗಳು ಒಂದು ಮಾದರಿಯಾಗಿದೆ. ಪ್ರಸ್ತುತ ವರ್ಷದಲ್ಲಿ ನಮ್ಮ ಸಂಸ್ಥೆಯ ಆರು ಘಟಕಗಳ ಉದ್ಯಮಿಗಳು Cosidici ಪ್ರಶಸ್ತಿಗಳನ್ನು ಪಡೆದಿದ್ದಾರೆ. ಪ್ರಶಸ್ತಿ ಪುರಸ್ಕರ ವಿವರಗಳ ಒಂದು ವರದಿಯು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

ಸಂಸ್ಥೆಯಿಂದ 62 ವರ್ಷಗಳಲ್ಲಿ ಹಣಕಾಸು ನೆರವು ಪಡೆದ ಪ್ರತಿಷ್ಠಿತ ಉದ್ಯಮಗಳ ಸಂಕ್ಷಿಪ್ತ ವಿವರಗಳನ್ನು ಸಹ ಈ ಸಂಚಿಕೆಯಲ್ಲಿ ನೀಡಲಾಗಿದೆ. ಹಾಗೂ ಸಂಸ್ಥೆಯಿಂದ ಹಣಕಾಸು ನೆರವನ್ನು ಪಡೆದ ಯಶಸ್ವಿ ಘಟಕದ ಯಶೋಗಾಥೆಯನ್ನು ಸಹ ಈ ಸಂಚಿಕೆಯಲ್ಲಿ ಮುದ್ರಿಸಲಾಗಿದೆ

## KSFC NEWS [Apr-Sept 2021]


| Sl. No. | Contents | Page No. |
|---|---|---|
| 1. | Chairman Speech in 62nd Annual General Meeting | 02 |
| 2. | Report on 7th COSIDICI National Award | 07 |
| 3. | Diamond Jubilee Celebration - A report | 09 |
| 4. | Started Ventures with KSFC's Financial Assistance | 11 |
| 5. | KSFC Assisted unit success story - M/s. Beejay Enterprises, Belagavi | 17 |
| 6. | Details of 4% Interest Subsidy Scheme for SC/ST Enterpreneurs | 18 |
| 7. | Details of 6% Interest Subversion Scheme for Micro & Small Enterprises | 19 |



**ಚಂದಾ ವಿವರ**

**ವಾರ್ಷಿಕ ಚಂದಾ ರೂ. 50.00***

**ಅಜೀವ ಸದಸ್ಯತ್ವ ರೂ.1000.00***

ಜಿ.ಎಸ್.ಟಿ. ಪ್ರತ್ಯೇಕ*



ಶ್ರೀ ಐ.ಎಸ್.ಎನ್. ಪ್ರಸಾದ್, ಭಾ.ಆ.ಸೇ
ಅಧ್ಯಕ್ಷರು

# ಶ್ರೀ ಐ ಎಸ್ ಎನ್ ಪ್ರಸಾದ್, ಭಾ.ಆ.ಸೇ.

## ಅಧ್ಯಕ್ಷರು

## ದಿನಾಂಕ 27ನೇ ಜುಲೈ 2021 ರಂದು ಸಂಸ್ಥೆಯ 62ನೇ ವಾರ್ಷಿಕ ಮಹಾಸಭೆಯಲ್ಲಿ ಮಾಡಿದ ಭಾಷಣ



ಡಾ. ಏಕ್‌ರೂಪ್ ಕೌರ್, ಭಾ.ಆ.ಸೇ
ವ್ಯವಸ್ಥಾಪಕ ನಿರ್ದೇಶಕರು

ಆತ್ಮೀಯ ಷೇರುದಾರರೇ,

ಸಂಸ್ಥೆಯ 62ನೇ ವಾರ್ಷಿಕ ಮಹಾಸಭೆಗೆ ತಮಗೆಲ್ಲ ಸ್ವಾಗತ ಬಯಸಲು ಹರ್ಷವಾಗುತ್ತಿದೆ. 31ನೇ ಮಾರ್ಚ್' 2021ಕ್ಕೆ ಅಂತ್ಯಗೊಂಡ ಸಂಸ್ಥೆಯ ಕಾರ್ಯಾಚರಣೆಯ 62ನೇ ವಾರ್ಷಿಕ ವರದಿ ಹಾಗೂ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳನ್ನು ಮಂಡಿಸಲು ನನಗೆ ಹರ್ಷವಾಗುತ್ತದೆ.

ಪ್ರಸಕ್ತ 2020–21ರ ಸಾಲಿನ ಆರ್ಥಿಕ ಸ್ಥಿತಿಯನ್ನು ಕ್ರೋಢೀಕರಿಸಲಾಗಿದ್ದು, ಸಂಸ್ಥೆಯು 42.90 ಕೋಟಿ ರೂ.ಗಳ ಲಾಭವನ್ನು ದಾಖಲಿಸಿದೆ. ಸಂಸ್ಥೆಯ ನಿರ್ದೇಶಕರ ಮಂಡಳಿಯ 62ನೇ ವಾರ್ಷಿಕ ವರದಿ ಮತ್ತು 31ನೇ ಮಾರ್ಚ್' 2021ಕ್ಕೆ ಅಂತ್ಯಗೊಂಡ ಲೆಕ್ಕಪತ್ರದ ವಿವರಗಳನ್ನು ತಮಗೆಲ್ಲರಿಗೂ ಈಗಾಗಲೇ ತಲುಪಿಸಲಾಗಿದ್ದು, ತಾವೆಲ್ಲರೂ ಅದನ್ನು ಪರಾಮರ್ಶಿಸಿದ್ದೀರೆಂದು ಭಾವಿಸಿದ್ದೇನೆ. ಆದಾಗ್ಯೂ 2020–21ರಲ್ಲಿ ಸಂಸ್ಥೆಯ ಪ್ರಗತಿಯ ಪ್ರಮುಖ ಅಂಶಗಳನ್ನು ಪರಿಶೀಲಿಸುವ ಮುನ್ನ ಜಾಗತಿಕ, ರಾಷ್ಟ್ರ ಹಾಗೂ ರಾಜ್ಯದ ಆರ್ಥಿಕತೆಯ ಪಕ್ಷಿನೋಟವನ್ನು ಪರಾಮರ್ಶಿಸಬಹುದು.

**ಜಾಗತಿಕ ಆರ್ಥಿಕ ನೋಟ :**

ವಿಶ್ವ ಆರ್ಥಿಕತೆ (ಮಿತವ್ಯಯ) 2021ರಲ್ಲಿ ಶೇ.5.6ರಷ್ಟು ಪ್ರಮಾಣದಲ್ಲಿ ವಿಸ್ತರಣೆಯಾಗಲಿದೆ. ಕಳೆದ 80 ವರ್ಷಗಳಲ್ಲಿ ಆರ್ಥಿಕ ಹಿಂಜರಿತದ ಅವಧಿಯ ನಂತರ ಇದು ಅತ್ಯಂತ ತೀವ್ರಗತಿಯಲ್ಲಿದೆ. ಇದಕ್ಕೆ ಭಾಗಶಃ ಸ್ಥಿರ ಆದರೆ ಲಸಿಕೆ ದೊರೆಯುವಿಕೆಯಲ್ಲಿನ ಅತಿಯಾದ ಏರಿಳಿತಗಳೇ ಕಾರಣ ಎಂದು ಗುರುತಿಸಲಾಗಿದೆ. ಜಾಗತಿಕ ಆರ್ಥಿಕ ಪುನಃಶ್ಚೇತನವು ಬಹಳಷ್ಟು ಅಸಮಾನತೆಯಿಂದ ಕೂಡಿದೆ. ಬಹುತೇಕ ಉದಯೋನ್ಮುಖ ಮಾರುಕಟ್ಟೆ ಮತ್ತು ಅಭಿವೃದ್ಧಿಶೀಲ ಆರ್ಥಿಕ ವಹಿವಾಟುಗಳು ಹಿಂಜರಿತದೊಂದಿಗೆ ಆರ್ಥಿಕ ಬೆಳವಣಿಗೆಯು ಕೆಲವೇ ಪ್ರಮುಖ ಹಣಕಾಸು ವಹಿವಾಟುಗಳಲ್ಲಿ ಕೇಂದ್ರೀಕೃತಗೊಂಡಿದೆ.

ಜಾಗತಿಕ ವೃದ್ಧಿಯ ಪ್ರಮಾಣವು ಶೇ.4.3ರಷ್ಟು ಸಾಧಾರಣ ದರದೊಂದಿಗೆ ಆರ್ಥಿಕ ಪುನಶ್ಚೇತನವು 2022ರಲ್ಲಿ ಮುಂದುವರೆಯುವುದೆಂದು ನಿರೀಕ್ಷಿಸಿದೆ. ಸರಿ ಸುಮಾರು ಶೇ.90ರಷ್ಟು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಆರ್ಥಿಕ ಸ್ಥಿತಿಯು ಕೋವಿಡ್–19 ಸಾಂಕ್ರಾಮಿಕ ಪೂರ್ವದಲ್ಲಿದ್ದ ಪ್ರತಿ ವ್ಯಕಿಯ ಆದಾಯದ (per capita Income) ಮಟ್ಟವನ್ನು 2022ರಲ್ಲಿ ಪುನ: ತಲುಪಬಹುದಾಗಿ ನಿರೀಕ್ಷಿಸಲಾಗಿದೆ. ಹಾಗೆಯೇ ಭಾಗಶ: ಉದಯೋನ್ಮುಖ ಮಾರುಕಟ್ಟೆ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಆರ್ಥಿಕ ಸ್ಥಿತಿಯು ಸಹ ಈ ಸಾಧನೆ ಮಾಡಬಹುದೆಂಬ ಆಶಯ ಹೊಂದಲಾಗಿದೆ. ತತ್ಪರಿಣಾಮವಾಗಿ ಮುಂದುವರಿದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಆರ್ಥಿಕ ಸ್ಥಿತಿಯಲ್ಲಿ ಪ್ರತಿ ವ್ಯಕ್ತಿ ಆದಾಯ (per capita Income) ಮಟ್ಟ ತಲುಪುವಿಕೆಯು ನಿಧಾನಗತಿಯಾದರೆ, ಬಹಳಷ್ಟು ಬಡರಾಷ್ಟ್ರಗಳ ಆರ್ಥಿಕ ಪರಿಸ್ಥಿತಿಯು ಹಿಮ್ಮುಖವಾಗುವ ಸಾಧ್ಯತೆಗಳಿರುವವು.

**ಭಾರತೀಯ ಆರ್ಥಿಕ ನೋಟ:**

2020ನೇ ವರ್ಷವು ಸಂಪೂರ್ಣವಾಗಿ ಕೋವಿಡ್–19ರ ಸಾಂಕ್ರಾಮಿಕ ಸೋಂಕಿಗೀಡಾಗಿದ್ದು ವಿಶ್ವ ಆರ್ಥಿಕ ಬಿಕ್ಕಟಿನ ಅವಧಿಯಿಂದ ಭಾರತ ಮತ್ತು ಜಗತ್ತಿಗೆ ಅತ್ಯಂತ ದುಸ್ತರವಾದ ಆರ್ಥಿಕ ಸವಾಲುಗಳನ್ನು ತಂದೊಡ್ಡಿದೆ.

ಒಟ್ಟು ಸ್ಥಳೀಯ ಉತ್ಪನ್ನದ (ಜಿಡಿಪಿ) ಬೆಳವಣಿಗೆಯು 2019–20ನೇ ಸಾಲಿನಲ್ಲಿದ್ದ ಶೇ.4.0ರ ಪ್ರಮಾಣಕ್ಕೆ ಹೋಲಿಸಿದಲ್ಲಿ 2020–21ನೇ ಸಾಲಿನಲ್ಲಿ ಋಣಾತ್ಮಕ (–)8.0 ಪ್ರಮಾಣದಲ್ಲಿರುವುದೆಂದು ಅಂದಾಜಿಸಲಾಗಿದೆ. ಮುಂಗಾರು ಸುಗ್ಗಿ ಮತ್ತು ಹಿಂಗಾರು ಬಿತ್ತುವಿಕೆಯಂತಹ ಕೃಷಿ ಚಟುವಟಿಕೆಗಳು ಕೋವಿಡ್–19ರ ಸೋಂಕಿನಿಂದಾಗಿ ಜಾರಿಗೊಳಿಸಲಾಗಿದ್ದ ಲಾಕ್‌ಡೌನ್‌ನಿಂದ ಬಹುಮಟ್ಟಿಗೆ ಬಾಧಿತಗೊಂಡಿಲ್ಲ. ಕೈಗಾರಿಕೋದ್ಯಮ ಮತ್ತು ಸೇವಾವಲಯಗಳು ಈ ವರ್ಷ ಕ್ರಮವಾಗಿ ಶೇ.9.6 ಮತ್ತು ಶೇ. 8.8ರಷ್ಟು ಪ್ರಮಾಣದಲ್ಲಿ ಕುಸಿತವನ್ನು ಕಾಣುವುದೆಂಬ ಲೆಕ್ಕಚಾರವಿದೆ. ಕೈಗಾರಿಕಾ ವಲಯ ವ್ಯಾಪ್ತಿಯಲ್ಲೇ ಗಣಿಗಾರಿಕೆಯು ಶೇ.12.4ರಷ್ಟು, ಉತ್ಪಾದಕಾ ವಲಯವು ಶೇ.9.4 ಮತ್ತು ನಿರ್ಮಾಣ ವಲಯವು ಶೇ.12.6ರಷ್ಟು ಕುಸಿತಕ್ಕೀಡಾಗುವ ಸಾಧ್ಯತೆಗಳಿರುವವು. ಬಳಕೆದಾರ (ಉಪಯುಕ್ತತಾ) ವಲಯವು ಚುರುಕಿನ ಪುನಶ್ಚೇತನ ಕಂಡಿದ್ದು 2020–21ನೇ ಸಾಲಿನಲ್ಲಿ ಶೇ.2.7ರಷ್ಟು ಧನಾತ್ಮಕ ಬೆಳವಣಿಗೆಯನ್ನ ದಾಖಲಿಸಲಾಗಿದೆ. ಸೇವಾ ವಲಯ ವ್ಯಾಪ್ತಿಯಲ್ಲಿ ವಾಣಿಜ್ಯ, ಹೋಟೆಲ್‌ಗಳು, ಸಾರಿಗೆ ಮತ್ತು ಸಂಪರ್ಕ ವಿಭಾಗಗಳು ಶೇ.21.4ರಷ್ಟು ಪ್ರಮಾಣದ ಕುಸಿತಕ್ಕೀಡಾಗುವುದೆಂದು ಅಂದಾಜಿಸಿದೆ.

**ಕರ್ನಾಟಕ ಆರ್ಥಿಕ ನೋಟ :**

ಕೋವಿಡ್–19 ಸಾಂಕ್ರಾಮಿಕ ರೋಗವು ಆಘಾತದ ರೀತಿಯಲ್ಲಿ ಜನಸಾಮಾನ್ಯರಿಗೆ ಆರ್ಥಿಕ ಮತ್ತು ಆರೋಗ್ಯ ಬಿಕ್ಕಟ್ಟನ್ನು ಉಂಟುಮಾಡಿರುತ್ತದೆ. ವೈರಸ್ ನಿಗ್ರಹಿಸಲು ಕೈಗೊಂಡ ಅಗತ್ಯವಾದ ಕ್ರಮಗಳು ಆರ್ಥಿಕ ಕುಸಿತವನ್ನು ಉಂಟು ಮಾಡಿರುತ್ತದೆ. ಲಾಕ್‌ಡೌನ್ ಅವಧಿಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಮತ್ತು ರಾಜ್ಯಗಳಲ್ಲಿ ಉತ್ಪಾದನೆ, ಬಳಕೆ, ವಿನಿಮಯ ಮತ್ತು ಇತರ ಪರಸ್ಪರ ಅವಲಂಬಿತ ಆರ್ಥಿಕ ಚಟುವಟಿಕೆಗಳು ಉದ್ಯಮಗಳನ್ನು ಕುಂಠಿತಗೊಳಿಸಿದ್ದರಿಂದ ತೀವ್ರತರವಾಗಿ ಪರಿಣಾಮಗಳನ್ನು ಅನುಭವಿಸಲಾಗಿರುತ್ತದೆ. ಉದ್ಯೋಗ ಮತ್ತು ಆದಾಯ ನಷ್ಟಗಳು, ಅನೌಪಚಾರಿಕ (ಅಸಂಘಟಿತ ವಲಯವೂ

ಸೇರಿದಂತೆ) ಕ್ಷೇತ್ರಗಳಲ್ಲಿನ ಕಾರ್ಮಿಕರ ಮೇಲೆ ಮತ್ತು ಶಾಸನಬದ್ಧ ಸಾಮಾಜಿಕ ಭದ್ರತಾ ಕ್ರಮಗಳಿಂದ ವಂಚಿತರಾದ ಅಸುರಕ್ಷಿತ ಬಡ ಕುಟುಂಬಗಳ ಮೇಲೆ ತೀವ್ರತರವಾಗಿ ಪರಿಣಾಮವನ್ನು ಬೀರಿರುತ್ತದೆ. ವಿಶೇಷವಾಗಿ ವಲಸಿಗರು ಅಥವಾ ಮನೆಯಿಲ್ಲದವರಿಗೆ ಮತ್ತು ಅವರ ಅವಲಂಬಿತರಿಗೆ ಜೀವನೋಪಾಯವು ನಿರ್ಣಾಯಕ ವಿಷಯವಾಗಿರುತ್ತದೆ. ಕೋವಿಡ್ ಸಾಂಕ್ರಾಮಿಕ ಪರಿಸ್ಥಿತಿಯಲ್ಲೂ ಕರ್ನಾಟಕ ರಾಜ್ಯದ ಸಾಧನೆಗಳು ಗಮನಾರ್ಹವಾಗಿರುತ್ತದೆ.

2020-21 ನೇ ಸಾಲಿನ ಮುನ್ಸೂಚನಾ ಅಂದಾಜುಗಳಂತೆ ಕೋವಿಡ್-19 ಮಹಾಮಾರಿ ನಿಯಂತ್ರಿಸಲು ವಿಧಿಸಲಾಗಿದ್ದ ಲಾಕ್‌ಡೌನ್ ಕ್ರಮಗಳಿಂದಾಗಿ, ರಾಜ್ಯದ ಒಟ್ಟು ಅಂತರಿಕ ಉತ್ಪನ್ನವು ಸ್ಥಿರ (2011-12) ಬೆಲೆಗಳಲ್ಲಿ ಶೇ.(-)2.6 ಬೆಳವಣಿಗೆಯೊಂದಿಗೆ 11,13,818 ಕೋಟಿ ರೂಪಾಯಿಗಳಾಗುವ ನಿರೀಕ್ಷೆಯಿದೆ.

ಭಾರತದ ನಾವೀನ್ಯತೆ ಸೂಚ್ಯಂಕದಲ್ಲಿ ಮತ್ತು ನವೀಕರಿಸ ಬಹುದಾದ ಇಂಧನದಲ್ಲಿ ರಾಜ್ಯವು ಪ್ರಥಮ ಸ್ಥಾನದಲ್ಲಿದೆ ಹಾಗೂ ರಾಜ್ಯವು ಹಾಲು ಉತ್ಪಾದನೆಯಲ್ಲಿ 2ನೇ ಸ್ಥಾನದಲ್ಲಿದೆ. ರಾಜ್ಯವು ದೇಶದ ಅಂತರಿಕ ಉತ್ಪನ್ನಕ್ಕೆ ಶೇ.8 ರಷ್ಟು ಮತ್ತು ದೇಶದ ಮಾಹಿತಿ ತಂತ್ರಜ್ಞಾನ ರಫ್ತಿಗೆ ಶೇ.40 ರಷ್ಟು ಕೊಡುಗೆಯನ್ನು ರಾಜ್ಯವು ನೀಡಿರುತ್ತದೆ.

ಪ್ರಸಕ್ತ ಬೆಲೆಗಳಲ್ಲಿ 2019-20ನೇ ಸಾಲಿನಲ್ಲಿ ರಾಜ್ಯದ ನಿವ್ವಳ ತಲಾ ಆದಾಯವು 2,23,175 ರೂಪಾಯಿಗಳಿಷ್ಟಿದ್ದು. ಇದು 2020-21ನೇ ಸಾಲಿಗೆ ಶೇ.1.6ರಷ್ಟು ಹೆಚ್ಚಳದೊಂದಿಗೆ 2,26,796 ರೂಪಾಯಿಗಳಷ್ಟಾಗುವುದೆಂದು ಅಂದಾಜಿಸಲಾಗಿದೆ.

2019-20 ನೇ ಸಾಲಿನ ರಾಜ್ಯದ ಒಟ್ಟು ಅಂತರಿಕ ಉತ್ಪನ್ನದಲ್ಲಿ ಕೃಷಿ ವಲಯದ ಕೊಡುಗೆ ಶೇ.12.16 ರಷ್ಟಿದ್ದು, 2020-21ನೇ ಸಾಲಿಗೆ ಶೇ.13.15ಕ್ಕೆ ಏರಿಕೆಯಾಗಿರುತ್ತದೆ. 2019-20ನೇ ಸಾಲಿನಲ್ಲಿ ಕೈಗಾರಿಕಾ ವಲಯದ ಕೊಡುಗೆ ಶೇ.21.68 ರಷ್ಟಿದ್ದು 2020-21ನೇ ಸಾಲಿನಲ್ಲಿ ಶೇ.20.31ಕ್ಕೆ ಇಳಿಕೆಯಾಗಿರುತ್ತದೆ. ಒಟ್ಟು ಅಂತರಿಕ ಉತ್ಪನ್ನದಲ್ಲಿ ಸೇವಾ ವಲಯದ ಕೊಡುಗೆ ಅಧಿಕವಾಗಿದ್ದು, 2019-20ನೇ ಸಾಲಿನಲ್ಲಿ ಶೇ.66.16ರಷ್ಟಿದ್ದು. 2020-21ನೇ ಸಾಲಿನಲ್ಲಿ ಶೇ.66.53ಕ್ಕೆ ಏರಿಕೆಯಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. 2020-21ನೇ ವರ್ಷದಲ್ಲಿ ಸ್ಥಿರಾಸ್ತಿ, ವೃತ್ತಿಪರ ಸೇವೆಗಳು ಮತ್ತು ವಾಸ ಗೃಹಗಳ ಒಡೆತನ ವಲಯದ ಕೊಡುಗೆಯು ರಾಜ್ಯದ ಒಟ್ಟು ಅಂತರಿಕ ಉತ್ಪನ್ನದಲ್ಲಿ ಅತಿ ಹೆಚ್ಚು ಅಂದರೆ ಶೇ.33.46 ರಷ್ಟಿರುತ್ತದೆ. ನಂತರದ ಸ್ಥಾನಗಳಲ್ಲಿ ತಯಾರಿಕಾ ವಲಯ (ಶೇ.13.11). ವ್ಯಾಪಾರ ಮತ್ತು ದುರಸ್ತಿ ಸೇವೆಗಳು (ಶೇ.10.38) ಹಾಗೂ ಬೆಳೆಗಳು (ಶೇ.8.57) ವಲಯಗಳು ಇರುತ್ತವೆ.

ಹಣಕಾಸು ವರ್ಷ 2020-21 (ಫೆಬ್ರವರಿ 2021 ಅಂತ್ಯದವರೆಗೆ) ರಾಜ್ಯದ ಒಟ್ಟು ರಫ್ತು ಮೌಲ್ಯವು US$ 84,807.05 ಮಿಲಿಯನ್‌ಗಳಾಗಿರುತ್ತದೆ. ರಾಜ್ಯದ ಎಲೆಕ್ಟ್ರಾನಿಕ್ ಮತ್ತು ಸಾಫ್ಟ್‌ವೇರ್ ರಫ್ತು ಮೌಲ್ಯವು ಶೇ.84 (US$ 71,629.03 ಮಿಲಿಯನ್ ಗಳಾಗಿರುತ್ತದೆ) ಹಾಗೂ ಮರ್ಚಂಡೈಸ್ ರಫ್ತು ಮೌಲ್ಯವು ಶೇ.16. (US$ 13,178.02 ಮಿಲಿಯನ್) ದೇಶದ ಒಟ್ಟು ರಫ್ತುವಿನಲ್ಲಿ ರಾಜ್ಯವು ಶೇ.19 ರಷ್ಟು ಪಾಲು ಹೊಂದಿದೆ.

ರಾಜ್ಯದ ಏಕಗವಾಕ್ಷಿ ಯೋಜನಾ ಮಂಜೂರಾತಿ ಸಮಿತಿಯ ಮೂಲಕ ರಾಜ್ಯವು ಕೈಗಾರಿಕಾ ಬಂಡವಾಳವನ್ನು ಆಕರ್ಷಿಸುತ್ತಿದೆ. ಪ್ರಸ್ತುತ ವರ್ಷ ಸಮಿತಿಯ 307 ಯೋಜನೆಗಳಿಂದ 15,270.66 ಕೋಟಿ ರೂ.ಗಳ ಮೊತ್ತದ ಉದ್ದೇಶಿತ ಬಂಡವಾಳ ಹೂಡಿಕೆಗೆ ಒಪ್ಪಿಗೆ ನೀಡಿದ್ದು, ಈ ಕೈಗಾರಿಕಾ ಯೋಜನೆಗಳಿಂದ ಸುಮಾರು 85,694 ಉದ್ಯೋಗಾವಕಾಶ ಸೃಷ್ಟಿಯಾಗಲಿದೆ. ರಾಜ್ಯದ ಉನ್ನತ ಮಟ್ಟದ ಯೋಜನಾ ಮಂಜೂರಾತಿ ಸಮಿತಿಯು 09 ಬೃಹತ್ ಕೈಗಾರಿಕಾ ಯೋಜನೆಗಳಿಂದ 37,464.10 ಕೋಟಿ ರೂ.ಗಳ ಉದ್ದೇಶಿತ ಬಂಡವಾಳ ಹೂಡಿಕೆಗೆ ಅನುಮೋದನೆ ನೀಡಿದ್ದು, ಈ 09 ಬೃಹತ್ ಯೋಜನೆಗಳಿಂದ ಸುಮಾರು 25,909 ಉದ್ಯೋಗವಕಾಶ ರಾಜ್ಯದಲ್ಲಿ ಸೃಷ್ಟಿಯಾಗಲಿದೆ.

ಪ್ರಸಕ್ತ ವರ್ಷದಲ್ಲಿ ರಾಜ್ಯವು US$ 3,660 ಮಿಲಿಯನ್ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವುದರ ಮೂಲಕ ದೇಶದ ಒಟ್ಟು ವಿದೇಶಿ ನೇರಬಂಡವಾಳ US$ 30,004 ಮಿಲಿಯನ್‌ನಲ್ಲಿ ಶೇ.12 ರಷ್ಟು ಆಗಿರುತ್ತದೆ.

ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳು ರಾಜ್ಯದ ಕೈಗಾರಿಕಾ ಅಭಿವೃದ್ಧಿಗೆ ಪ್ರಮುಖ ಪಾತ್ರ ವಹಿಸಲಾಗಿದೆ. 2020-21ನೇ ಹಣಕಾಸು ವರ್ಷದಲ್ಲಿ (ಜೂನ್ ಅಂತ್ಯದವರೆಗೆ) 82,227 ಘಟಕಗಳು ರಾಜ್ಯದಲ್ಲಿ ನೋಂದಾಯಿಸಿಕೊಂಡಿದ್ದು, ಈ ಘಟಕಗಳಿಂದ 18,08,442 ಲಕ್ಷ ರೂ.ಗಳ ಬಂಡವಾಳ ಹೂಡಿಕೆಯಾಗುವ ಸಾಧ್ಯತೆ ಇದ್ದು, 5,42,890 ಉದ್ಯೋಗಾವಕಾಶ ಸೃಷ್ಟಿಯಾಗಲಿದೆ.

**ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ರಾಜ್ಯ ಸರ್ಕಾರದ ಬೆಂಬಲ :**

ಪ್ರಸ್ತುತ ಹಣಕಾಸು ವರ್ಷದಲ್ಲಿ ಕರ್ನಾಟಕ ಸರ್ಕಾರವು ಸಂಸ್ಥೆಗೆ 100.00 ಕೋಟಿ ರೂ.ಗಳ ಈಕ್ವಿಟಿ ಬಂಡವಾಳವನ್ನು ಹಾಗೂ 172.25 ಕೋಟಿ ರೂ.ಗಳ ಬಡ್ಡಿ ಸಹಾಯಧನದ ನೆರವನ್ನು ಹಲವು ಯೋಜನೆಗಳಡಿಯಲ್ಲಿ ಒದಗಿಸಿದ್ದು, ಅವುಗಳ ವಿವರ ಈ ಕೆಳಗಿನಂತಿವೆ.

| | |
|---|---|
| ಪರಿಶಿಷ್ಟ ಜಾತಿ ಉದ್ದಿಮೆದಾರರಿಗೆ | 42.50 ಕೋಟಿ ರೂ.ಗಳು |
| ಪರಿಶಿಷ್ಟ ಪಂಗಡಗಳ ಉದ್ದಿಮೆದಾರರಿಗೆ | 12.00 ಕೋಟಿ ರೂ.ಗಳು |
| ಮಹಿಳಾ ಉದ್ದಿಮೆದಾರರಿಗೆ | 67.75 ಕೋಟಿ ರೂ.ಗಳು |
| ಮೊದಲ ಪೀಳಿಗೆ ಉದ್ದಿಮೆದಾರರಿಗೆ | 3.00 ಕೋಟಿ ರೂ.ಗಳು |
| ಇತರೇ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ | 47.00 ಕೋಟಿ ರೂ.ಗಳು |
| **ಒಟ್ಟು** | **172.25 ಕೋಟಿ ರೂ.ಗಳು** |

**ಸಹಾಯಧನ ಮತ್ತು ಅನುದಾನಗಳು:**

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಉದ್ಯಮಿಗಳು ಸ್ಥಾಪಿಸುವ ಜವಳಿ ಮತ್ತು ಕೈಮಗ್ಗ ಘಟಕಗಳಿಗೆ ವಿಶೇಷ ಹಣಕಾಸಿನ ಅನುದಾನ ಯೋಜನೆಯಡಿಯಲ್ಲಿ ಕರ್ನಾಟಕ ಸರ್ಕಾರವು 20.56 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಿದೆ.

**ಪ್ರಮುಖ ನೀತಿ ನಿರ್ಧಾರಗಳು:**

ಸಂಸ್ಥೆಯ ಸಾಲ ನೀತಿಗೆ ಕೆಲವು ಮಾರ್ಪಾಡುಗಳನ್ನು ಮಾಡಲಾಯಿತು.

ನಷ್ಟದ ಸ್ವತ್ತುಗಳನ್ನು ಗುರುತಿಸಿ ವಿವೇಕಯುತವಾಗಿ ಸಾಲಗಳನ್ನು ಮನ್ನಾ ಮಾಡುವ ಬಗ್ಗೆ ತೀರ್ಮಾನ.

**ಕೋವಿಡ್-19 ನಿಯಂತ್ರಕ ಪ್ಯಾಕೇಜ್**

ಸಾಲದ ಮೇಲಿನ ಬಡ್ಡಿಯನ್ನು ಒಡಂಬಡಿಕೆ ಪೂರ್ವ ಡಿ-3 ಮತ್ತು ಎಂ.ಆರ್. ಪ್ರಕರಣಗಳಿಗೆ ಸಂಬಂಧಿಸಿದಂತೆ ಸ್ಥಗಿತಗೊಳಿಸುವ ಬಗ್ಗೆ ತೀರ್ಮಾನ.

ಸಂಸ್ಥೆಯ ಮಾಹಿತಿ ತಂತ್ರಜ್ಞಾನವನ್ನು ಉನ್ನತೀಕರಿಸುವ ಬಗ್ಗೆ ತೀರ್ಮಾನ.

ನೂತನ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೂಕ್ಷ್ಮ ಮತ್ತು ಸಣ್ಣ, ಉತ್ಪಾದನಾ ಹಾಗೂ ಇತರೆ ಸೇವಾ ಘಟಕಗಳಿಗೆ ಪರಿಷ್ಕೃತ ಬಡ್ಡಿ ಸಹಾಯಧನ ಯೋಜನೆ ಜಾರಿ.

ಕೇಡರ್ ಮತ್ತು ನೇಮಕಾತಿ ನಿಯಮಗಳು ಹಾಗೂ ಮಾನವಶಕ್ತಿ ಸಂಪನ್ಮೂಲ ನಿಯಮಗಳಿಗೆ ತಿದ್ದುಪಡಿ.

**ಕಾರ್ಯಾಚರಣೆಯ ಮುಖ್ಯಾಂಶಗಳು :**

**ಮಂಜೂರಾತಿಗಳು:**

2020-21ರ ಆರ್ಥಿಕ ವರ್ಷದಲ್ಲಿ ವಿವಿಧ ಸಾಲ ಯೋಜನೆಗಳ ಮೂಲಕ 445 ಪ್ರಕರಣಗಳಿಗೆ 401.66 ಕೋಟಿ ರೂ.ಗಳ ಸಾಲ ಮಂಜೂರಾತಿ ಮಾಡಲಾಗಿದೆ.

2019-20ರಲ್ಲಿ 710 ಪ್ರಕರಣಗಳಿಗೆ 667.81 ಕೋಟಿ ರೂ.ಗಳನ್ನು ಮಂಜೂರಾತಿ ಮಾಡಲಾಗಿತ್ತು. 31.3.2021ರವರೆಗೆ 1,74,662 ಪ್ರಕರಣಗಳಿಗೆ 18,286.38 ಕೋಟಿ ರೂ.ಗಳ ಸಂಚಿತ ಸಾಲ ಮಂಜೂರು ಮಾಡಲಾಗಿದೆ.

**ವಿತರಣೆ:**

2020-21ನೇ ಸಾಲಿನಲ್ಲಿ ಸಂಸ್ಥೆ 432.96 ಕೋಟಿ ರೂ.ಗಳನ್ನು ವಿತರಣೆ ಮಾಡಿದೆ. ಕಳೆದ ವರ್ಷ 727.90 ಕೋಟಿ ರೂ. ಗಳನ್ನು ವಿತರಣೆ ಮಾಡಿತ್ತು. 31.03.2021ರವರೆಗಿನ ಸಂಚಿತ ವಿತರಣೆ 14,389.83 ಕೋಟಿ ರೂ.ಗಳಷ್ಟು ತಲುಪಿದೆ.

**ಬಂಡವಾಳ, ಉತ್ಪನ್ನಗಳ ಮೌಲ್ಯ ಮತ್ತು ಉದ್ಯೋಗ:**

2020-21ನೇ ಸಾಲಿನಲ್ಲಿ ಸಂಸ್ಥೆಯಿಂದ ನೀಡಲಾದ ಸಾಲಗಳು 2,574.60 ಕೋಟಿ ರೂ.ಗಳಷ್ಟು ಹೂಡಿಕೆ ಮಾಡಬಹುದೆಂದು ಅಂದಾಜು ಮಾಡಲಾಗಿದ್ದು ಉತ್ಪಾದನೆಯ ಮೌಲ್ಯ 1,616.80 ಕೋಟಿ ರೂ. ಗಳಾಗಿದ್ದು, 5,169 ಜನರಿಗೆ ಉದ್ಯೋಗ ಸೃಷ್ಟಿಸುವ ಅಂದಾಜಿಸಲಾಗಿದೆ.

**ವಸೂಲಾತಿ:**

ಪ್ರಸ್ತುತ 2020-21ರ ವರ್ಷದಲ್ಲಿ ಸಂಸ್ಥೆ ಒಟ್ಟು 638.68 ಕೋಟಿ ರೂ.ಗಳನ್ನು ವಸೂಲಾತಿ ಮಾಡಿತು. ಕಳೆದ ವರ್ಷ ಸಂಸ್ಥೆಯು 720.85 ಕೋಟಿ ರೂ.ಗಳನ್ನು ವಸೂಲಿ ಮಾಡಿತ್ತು. ಪ್ರಸ್ತುತ ವರ್ಷದಲ್ಲಿ ವಸೂಲಾಗದ ಸಾಲಗಳಿಂದ [D-III(Pre MOU), D-III (Prudential), D-III(MR)] ಸಂಸ್ಥೆಯು 44.53 ಕೋಟಿ ರೂ.ಗಳನ್ನು ವಸೂಲಾತಿ ಮಾಡಲಾಗಿದೆ.

**ಸಂಸ್ಥೆಯಿಂದ ಕೋವಿಡ್-19ರ ಸಾಂಕ್ರಾಮಿಕ ಸೊಂಕು ಅವಧಿಯಲ್ಲಿ ಸಾಲಗಾರರಿಗೆ ಒದಗಿಸಿರುವ ಸೌಲಭ್ಯಗಳು :**

ಕೋವಿಡ್-19ರ ಸಾಂಕ್ರಾಮಿಕ ಪಿಡುಗಿನ ಸನ್ನಿವೇಶದಲ್ಲಿ ಆರ್‌ಬಿಐ / ಸಿಡ್ಬಿ ಸಂಸ್ಥೆಗಳು ಘೋಷಿಸಿದ ಪರಿಹಾರ ಕ್ರಮಗಳ ಅನ್ವಯ ಸಂಸ್ಥೆಯು ಸಾಲಗಾರರಿಗೆ ಈ ಕೆಳಗಿನ ಸವಲತ್ತುಗಳನ್ನು ನೀಡಿದೆ:-

ದಿನಾಂಕ 01.04.2020 ರಿಂದ 31.08.2020ರ ನಡುವಿನ ಅವಧಿಯಲ್ಲಿ ಪಾವತಿಸಬೇಕಿದ್ದ ಅಸಲು ಕಂತುಗಳನ್ನು ಮುಂದೂಡಲಾಯಿತು.

ದಿನಾಂಕ 10.09.2020 ರಂದು ಪಾವತಿಸಬೇಕಾದ ಬಡ್ಡಿ ಮತ್ತು ಅಸಲು ಕಂತಿನೊಂದಿಗೆ ದಿನಾಂಕ 01.04.2020 ರಿಂದ 31.08.2020ರ ನಡುವಿನ ಅವಧಿಯಲ್ಲಿ ಪಾವತಿಸಬೇಕಾಗಿದ್ದ ಬಡ್ಡಿ ಬಾಕಿಯನ್ನು ದಿನಾಂಕ 10.09.2020ರಂದು ಪಾವತಿಸಲು ಅನುವು ನೀಡಲಾಯಿತು.

ದಿನಾಂಕ 01.04.2020 ರಿಂದ 31.08.2020ರ ವಿರಾಮ (Moratorium period) ಅವಧಿಯಲ್ಲಿ ಗ್ರಾಹಕರಿಗೆ ಅಸಲು (Principal) ಮತ್ತು ಬಡ್ಡಿಯ (Interest) ಕಂತುಗಳನ್ನು ವಿಧಿಸಿರುವುದಿಲ್ಲ. ಹಾಗೂ ಈ ವಿರಾಮ (Moratorium period) ಅವಧಿಯಲ್ಲಿ ಗ್ರಾಹಕರಿಗೆ ಯಾವುದೇ ದಂಡ (Penal) ಮತ್ತು ಚಕ್ರಬಡ್ಡಿ (Compound Interest) ಯನ್ನು ವಿಧಿಸಲಿಲ್ಲ.

ಕರ್ನಾಟಕ ರಾಜ್ಯ ಸರ್ಕಾರದ ಬಡ್ಡಿ ಸಹಾಯಧನ ಯೋಜನೆ ಗೊಳಪಡುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಮಹಿಳಾ ಉದ್ದಿಮೆದಾರರು / ಮೊದಲ ಪೀಳಿಗೆ / ಸಾಮಾನ್ಯ ಯೋಜನೆಯಡಿಯಲ್ಲಿನ ಸಾಲಗಳಿಗೆ ಮರುಪಾವತಿಯ ಕಂತುಗಳಲ್ಲಿ ಬಡ್ಡಿ ಸಹಾಯಧನವನ್ನು ಹೊರತುಪಡಿಸಿ ಉಳಿದ ಮೊತ್ತವನ್ನು ಪಾವತಿಸಲು ಅನುವು ಮಾಡಲಾಯಿತು.

ಅಸಲು ಕಂತುಗಳ ಮರುಪಾವತಿ ಅವಧಿಯನ್ನು ಘಟಕವಾರು ಪರಿಸ್ಥಿತಿಯನ್ವಯ ಗ್ರಾಹಕರ ಕೋರಿಕೆ ಮೇರೆಗೆ ಎರಡು ವರ್ಷಗಳವರೆಗೆ ವಿಸ್ತರಿಸಿ (ಈಗಾಗಲೇ ನೀಡಿರುವ ವಿರಾಮ ಅವಧಿಯ 5 ತಿಂಗಳುಗಳು ಸೇರಿ) ಮರು ರೂಪಿಸಲಾದ ಸೌಲಭ್ಯವನ್ನು ಪ್ರವಾಸೋದ್ಯಮ ಹಾಗೂ ನಿರ್ಮಾಣ ಮತ್ತು ರಿಯಲ್ ಎಸ್ಟೇಟ್ ವಲಯಗಳಿಗೆ ಆದ್ಯತೆ ಮೇಲೆ ನೀಡಲಾಯಿತು.

ಸರ್ಕಾರದ ಬಡ್ಡಿ ಸಹಾಯಧನ ಸೌಲಭ್ಯವಿಲ್ಲದ ಘಟಕಗಳಿಗೆ 01.04.2020 ರಿಂದ 31.08.2020ರವರೆಗೆ ಪಾವತಿಸಬೇಕಾಗಿದ್ದ ಬಾಕಿ ಬಡ್ಡಿ ಮೊತ್ತವನ್ನು ಸುಲಭ ಕಂತುಗಳಲ್ಲಿ ದಿನಾಂಕ 31.03.2021ರ ಒಳಗೆ ಪಾವತಿಸಲು ಅವಕಾಶ ಮಾಡಿಕೊಡಲಾಯಿತು. ಈ ಸಾಲಗಳಿಗೆ ಶೇ.10.00(p.a) ಬಡ್ಡಿ ದರದಲ್ಲಿ ರಿಯಾಯಿತಿಯನ್ನು ನೀಡಲಾಯಿತು.

**ಸಂಸ್ಥೆಯಿಂದ 2020-21ರ ಆರ್ಥಿಕ ಸಾಲಿನಲ್ಲಿ ಸಾಲಗಾರರಿಗೆ ಕೆಳಕಂಡ ಸೌಲಭ್ಯಗಳನ್ನೂ ಸಹ ವಿಸ್ತರಿಸಲಾಗಿದೆ:-**

ಸೂಕ್ಷ್ಮ, ಸಣ್ಣ, ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ಸಾಲಗಳ ಮೇಲಿನ ಬಡ್ಡಿ ದರವನ್ನು ಶೇ.14 ರಿಂದ ಶೇ.11.50ಕ್ಕೆ (ನಿವ್ವಳ ಶೇ. 0.5 ರಿಯಾಯಿತಿಯಲ್ಲಿ) ಕಡಿತಗೊಳಿಸಿದೆ.

ಅವಧಿಪೂರ್ವ ಸಾಲ ಮರುಪಾವತಿಗೆ ವಿಧಿಸುವ ದಂಡವನ್ನು ಸ್ಥಗಿತಗೊಳಿಸಲಾಗಿದೆ ಮತ್ತು ಬ್ಯಾಂಕ್ ಹಾಗೂ ಇತರೆ ಹಣಕಾಸು

ಸಂಸ್ಥೆಗಳಿಗೆ ವರ್ಗಾಯಿಸುವ ಸಾಲಗಳ ಮೇಲಿನ ದಂಡವನ್ನು ಶೇ.2 ರಿಂದ ಶೇ.1 ಕ್ಕೆ ಕಡಿತಗೊಳಿಸಲಾಗಿದೆ.

**ಹಣಕಾಸು ಫಲಿತಾಂಶಗಳು:**

ಪ್ರಸ್ತುತ ವರ್ಷದಲ್ಲಿ ಸಂಸ್ಥೆಯು 484.09 ಕೋಟಿ ರೂ.ಗಳ ಒಟ್ಟಾರೆ ಆದಾಯವನ್ನು ಗಳಿಸಿದ್ದು, ಕಳೆದ ಆರ್ಥಿಕ ವರ್ಷದಲ್ಲಿ ಈ ಆದಾಯವು 358.81 ಕೋಟಿ ರೂ.ಗಳಾಗಿತ್ತು. ಲಾಭವು 42.90 ಕೋಟಿ ರೂ.ಗಳಷ್ಟಾಗಿದೆ.

**ಲಾಭಾಂಶ :**

2020–21ರ ಹಣಕಾಸು ವರ್ಷದಲ್ಲಿಯೂ ಮುಂದುವರೆದ ನಷ್ಟವಿದ್ದುದರಿಂದ (carry forward losses) ಸಂಸ್ಥೆಯ ವತಿಯಿಂದ ಯಾವುದೇ ರೀತಿಯ ಲಾಭಾಂಶವನ್ನು ಶಿಫಾರಸ್ಸು ಮಾಡಿರುವುದಿಲ್ಲ.

**ಖಜಾನೆ ಚಟುವಟಿಕೆ :**

ಪ್ರಸಕ್ತ ವರ್ಷದಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ರೂ.100.00 ಕೋಟಿ ಈಕ್ವಿಟಿ ಷೇರು ಬಂಡವಾಳ ನೀಡಿರುತ್ತದೆ. ದಿನಾಂಕ 31.3.2021ರ ಅಂತ್ಯಕ್ಕೆ ರೂ.795.39 ಕೋಟಿ ಈಕ್ವಿಟಿ ಷೇರು ಬಂಡವಾಳವಿರುತ್ತದೆ ಹಾಗೂ ಕಳೆದ ವರ್ಷದ ಅಂತ್ಯಕ್ಕೆ ರೂ.476.94 ಕೋಟಿ ಇರುತ್ತದೆ. ಪ್ರಸ್ತುತ ವರ್ಷದಲ್ಲಿ ರೂ.318.45 ಕೋಟಿ ಷೇರು ಅರ್ಜಿ ಮೊತ್ತವನ್ನು ಷೇರು ಬಂಡವಾಳವಾಗಿ ಪರಿವರ್ತಿಸಲಾಗಿದೆ. ದಿನಾಂಕ 31.3.2021ರ ಅಂತ್ಯಕ್ಕೆ ರೂ.100.00 ಕೋಟಿ ಷೇರು ಅರ್ಜಿ ಮೊತ್ತವಿರುತ್ತದೆ.

ಪ್ರಸಕ್ತ ವರ್ಷದಲ್ಲಿ ಸಂಸ್ಥೆಯು ರೂ.217.00 ಕೋಟಿ ಬಾಂಡುಗಳನ್ನು ಪಾವತಿಸಿದೆ. ಬಾಕಿ ಉಳಿದ ಬಾಂಡುಗಳು 850.00 ಕೋಟಿ ರೂ.ಗಳಿಗೆ ಇಳಿಕೆಯಾಗಿದ್ದು ಈ ಮೊತ್ತ 31.03.2020ರ ಅಂತ್ಯಕ್ಕೆ 1067.00 ಕೋಟಿ ರೂ. ಗಳಷ್ಟಿತ್ತು.

ಪ್ರಸ್ತುತ ವರ್ಷದಲ್ಲಿ ಸಂಸ್ಥೆಯು ಭಾರತೀಯ ಸ್ಟೇಟ್ ಬ್ಯಾಂಕಿನಿಂದ 150.00 ಕೋಟಿ ರೂ.ಗಳ ಅವಧಿಸಾಲವನ್ನು ಪಡೆಯಲಾಗಿ ಹಾಗೂ 43.09 ಕೋಟಿ ರೂ.ಗಳು ಹಾಗೂ ದ್ವೈಮಾಸಿಕ 100.10 ಕೋಟಿ ರೂ.ಗಳ ಅವಧಿ ಸಾಲದ ಮರುಪಾವತಿಯನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಯೂನಿಯನ್ ಬ್ಯಾಂಕ್ ಅಫ್ ಇಂಡಿಯಾಗಳಿಗೆ ಅನುಕ್ರಮವಾಗಿ ಮರುಪಾವತಿಸಿದೆ.

2019–20ರಲ್ಲಿನ ಬಾಂಡ್‌ಗಳ ಮೇಲಿನ ಬಡ್ಡಿಯು 110.43 ಕೋಟಿ ರೂ.ಗಳಿಂದ ಪ್ರಸ್ತುತ 2020–21ರ ಹಣಕಾಸು ವರ್ಷದಲ್ಲಿ 85.80 ಕೋಟಿ ರೂ.ಗಳಿಗೆ ಇಳಿಕೆಯಾಗಿದೆ. ಬಾಂಡ್ ಹೊಣೆಗಾರಿಕೆ ಕಡಿಮೆಯಾದ ಕಾರಣ ಬಡ್ಡಿ ಮೊತ್ತ ಇಳಿಕೆಯಾಗಿದೆ. ಮುಂದುವರಿದು ಸಂಸ್ಥೆಯು 20.62 ಕೋಟಿ ರೂ.ಗಳು ಹಾಗೂ 20.12 ಕೋಟಿ ರೂ.ಗಳ ಅವಧಿಸಾಲದ ಮೇಲಿನ ಬಡ್ಡಿಯ ಮರುಪಾವತಿಯನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಯೂನಿಯನ್ ಬ್ಯಾಂಕ್ ಅಫ್ ಇಂಡಿಯಾಗಳಿಗೆ ಅನುಕ್ರಮವಾಗಿ ಮರುಪಾವತಿಸಿದೆ. ಪ್ರಸ್ತುತ ವರ್ಷದಲ್ಲಿ ಸಂಸ್ಥೆಯು ಕರ್ನಾಟಕ ಸರ್ಕಾರಕ್ಕೆ ಖಾತರಿ ಕಮಿಷನ್ನಿನ ರೂಪದಲ್ಲಿ 14.50 ಕೋಟಿ ರೂ.ಗಳನ್ನು (ಜಿ.ಎಸ್.ಟಿಯ ನಿವ್ವಳದಲ್ಲಿ) ಪಾವತಿಸಿದ್ದು, 2019–20 ಸಾಲಿನಲ್ಲಿ ಈ ಮೊತ್ತವು 13.44 ಕೋಟಿ ರೂ.ಗಳಷ್ಟಿತ್ತು (ಜಿ.ಎಸ್.ಟಿಯ ನಿವ್ವಳದಲ್ಲಿ).

ಸಂಸ್ಥೆಯ ಒಟ್ಟು ದೀರ್ಘಾವಧಿ ಸಾಲವು 31–03–2020ರ ವರ್ಷಾಂತ್ಯಕ್ಕೆ 1,561.52 ಕೋಟಿ ರೂ.ಗಳಿಂದ 31.03.2021 ಅಂತ್ಯಕ್ಕೆ 1,301.34 ಕೋಟಿ ರೂ.ಗಳಿಗೆ ಇಳಿಕೆ ಕಂಡಿದೆ. 2020–21ನೇ ಸಾಲಿನ ಒಟ್ಟು ಬಡ್ಡಿ ಮತ್ತು ಆರ್ಥಿಕ ವೆಚ್ಚಗಳು 143.03 ಕೋಟಿ ರೂ.ಗಳಿಗೆ ಏರಿಕೆ ಕಂಡಿದ್ದು, 2019–20ನೇ ವರ್ಷಕ್ಕೆ 136.63 ಕೋಟಿ ರೂ.ಗಳಷ್ಟಿತ್ತು.

**ವ್ಯವಹಾರ ಅಭಿವೃದ್ಧಿ ಮತ್ತು ಸಾಲಗಳ ಸಂಶೋಧನೆ:**

ಸಂಸ್ಥೆಯ ವ್ಯವಹಾರವನ್ನು ಉತ್ತೇಜಿಸಲು ವಿಶೇಷ ಆಕರ್ಷಕ ಯೋಜನೆಗಳಾದ ಮಹಿಳಾ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಹಾಗೂ ಇತರೇ ಉದ್ಯಮಗಳಿಗೆ ಲಭ್ಯವಿರುವ ವಿಶೇಷ ಯೋಜನೆಗಳ ಪ್ರಚಾರಕ್ಕಾಗಿ ದೈನಿಕ ಪತ್ರಿಕೆಗಳಲ್ಲಿ ಜಾಹೀರಾತು ನೀಡುವ ಕಾರ್ಯವನ್ನು ಹಾಗೂ ಮಾರುಕಟ್ಟೆ ಸಮೀಕ್ಷೆ, ಮಾರುಕಟ್ಟೆ ವಿಶ್ಲೇಷಣಾ ವರದಿಗಳನ್ನು ಸಾಲ ಮಂಜೂರಾತಿಗಾಗಿ ಸಿದ್ಧಪಡಿಸಲಾಯಿತು. ಪ್ರಸ್ತುತ ವರ್ಷದಲ್ಲಿ, ಸಂಸ್ಥೆಯಿಂದ ನವೀಕೃತ ಸಾಲ ನೀತಿ 2020ನ್ನು ಅನುಷ್ಠಾನಗೊಳಿಸಲಾಯಿತು.

ಸಂಸ್ಥೆಯು ಪ್ರಸ್ತುತ ವರ್ಷ ಬೆಂಗಳೂರು ಟೆಕ್ ಶೃಂಗಸಭೆ 2020, ಏರ್ ಶೋ ಹಾಗೂ ಕೈಗಾರಿಕಾ ಸಂಘ ಸಂಸ್ಥೆಗಳಾದ KASSIA, FKCCI, AWAKE ಆಯೋಜಿಸಿದ ಕೈಗಾರಿಕಾ ಹಾಗೂ ಉದ್ಯಮಿಗಳ ಸಮಾವೇಶ ಸಮಾರಂಭಗಳಲ್ಲಿ ಭಾಗವಹಿಸಲಾಯಿತು. ಸಂಸ್ಥೆಯ ವತಿಯಿಂದ ರೂ.1.04 ಲಕ್ಷಗಳನ್ನು ವಿವಿಧ ಸಂಘ ಸಂಸ್ಥೆಗಳಿಗೆ ದೇಣಿಗೆ ನೀಡಲಾಯಿತು. ಸಂಸ್ಥೆಯು ಹೊರತರುವ ದ್ವೈಮಾಸಿಕ, KSFC NEWS ಪ್ರತಿಕೆಯಲ್ಲಿ ಸಂಸ್ಥೆಯ ಆಕರ್ಷಕ ಯೋಜನೆಗಳ ಮಾಹಿತಿಯನ್ನು ಪ್ರಕಟಿಸಲಾಯಿತು.

**ಹಣಕಾಸು ಸೇವೆಗಳ ಚಟುವಟಿಕೆಗಳು:**

ಸಾಮಾನ್ಯ ವಿಮಾ ಉತ್ಪನ್ನಗಳ ಮಾರಾಟಕ್ಕಾಗಿ ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿ ಹಾಗೂ ಇಫ್ಕೊ ಟೋಕಿಯೋ ಜನರಲ್ ಇನ್ಶೂರೆನ್ಸ್ ಕಂಪನಿಗಳೊಡನೆ ಸಂಸ್ಥೆಯು ಒಡಂಬಡಿಕೆ ಮಾಡಿಕೊಂಡಿದ್ದು, ಕಾರ್ಪೊರೇಟ್ ಏಜೆಂಟ್ ಆಗಿ ಕಾರ್ಯನಿರ್ವಹಿಸುತ್ತಿದೆ. ಪ್ರಸುತ್ತ 2020–21 ಆರ್ಥಿಕ ವರ್ಷದಲ್ಲಿ ಸಂಸ್ಥೆಯು 458.41 ಲಕ್ಷ ರೂ.ಗಳಷ್ಟು ವಿಮಾ ಕಂತುಗಳ ಮೂಲಕ ವ್ಯವಹಾರ ನೀಡಿ, ಒಟ್ಟಾರೆಯಾಗಿ 58.56 ಲಕ್ಷ ರೂ.ಗಳ ಕಮಿಷನ್ ಗಳಿಸಿದೆ (ಎರಡು ಕಂಪನಿಗಳಿಂದ).

**ವಜ್ರಮಹೋತ್ಸವ ಆಚರಣೆ:**

ವಜ್ರಮಹೋತ್ಸವ ಸಮಾರಂಭವನ್ನು ಜನವರಿ 30, 2021 ರಂದು ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಅಯೋಜಿಸಲಾಗಿತ್ತು.

ಸನ್ಮಾನ್ಯ ಮುಖ್ಯಮಂತಿಗಳಾದ ಶ್ರೀ.ಬಿ.ಎಸ್.ಯಡಿಯೂರಪ್ಪ, ಕರ್ನಾಟಕ ಸರ್ಕಾರ ಇವರು ವಜ್ರಮಹೋತ್ಸವ ಸ್ಮರಣ ಸಂಚಿಕೆ "Triumphant Sixty" ಯನ್ನು ಬಿಡುಗಡೆ ಮಾಡಿದರು. ಸನ್ಮಾನ್ಯ ಉಪಮುಖ್ಯಮಂತ್ರಿ ಡಾ:ಅಶ್ವಥನಾರಾಯಣ.ಸಿ.ಎನ್ ಹಾಗೂ ಸನ್ಮಾನ್ಯ ಶಿಕ್ಷಣ ಸಚಿವರು ಶ್ರೀ.ಎಸ್.ಸುರೇಶ್‌ಕುಮಾರ್ ಉಪಸ್ಥಿತರಿದ್ದರು.

ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಸಂಸ್ಥೆಯ ಹೊಸ ವಿನ್ಯಾಸೀಕೃತ ಜಾಲತಾಣ (Website)ನ್ನು ಅನಾವರಣಗೊಳಿಸಲಾಯಿತು. ಹೊಸ ವಿನ್ಯಾಸೀಕೃತ ಜಾಲತಾಣದಲ್ಲಿ ಸಂಸ್ಥೆಯ ಹಣಕಾಸು ಉತ್ಪನ್ನಗಳು, ಶಾಖಾ ಕಛೇರಿಗಳ ವಿವರ ಮತ್ತು ವಿಳಾಸ, ಸಂಸ್ಥೆಯಿಂದ ಮಹಿಳೆಯರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ, ಹಿಂದುಳಿದ ವರ್ಗಗಳ ಉದ್ಯಮಿಗಳಿಗೆ ಲಭ್ಯವಿರುವ ವಿಶೇಷ ಸಾಲ ಯೋಜನೆಗಳ ವಿವರಗಳ ಹಾಗೂ ಸಂಸ್ಥೆಯ ಕಾರ್ಯಾಚರಣೆ ನೀತಿಗಳು ದೊರೆಯುತ್ತಿದೆ.

ಕಾಫೀ ಟೇಬಲ್ ಪುಸ್ತಕ – "Triumphant Sixty" ಸಂಸ್ಥೆಯಿಂದ ಹಣಕಾಸು ನೆರವು ಪಡೆದು ಯಶ್ವಸಿಯಾದ ಘಟಕಗಳ ವಿವರಗಳನ್ನು ಒಳಗೊಂಡಿದೆ.

**2021–22 ನೇ ಸಾಲಿನ ಮುನ್ನೋಟ:**

ಆರ್ಥಿಕ ವರ್ಷ 2020–21 ರ ಕೋವಿಡ್–19 ಸಂಕ್ರಾಮಿಕ ರೋಗವು ಆಘಾತಕಾರಿ ರೀತಿಯಲ್ಲಿ ದೇಶದ ಆರ್ಥಿಕ ಮತ್ತು ಆರೋಗ್ಯ ಬಿಕ್ಕಟ್ಟನ್ನು ಸೃಷ್ಟಿಸಿರುತ್ತದೆ. ಕರೋನ ವೈರಸ್‌ನ್ನು ನಿಗ್ರಹಿಸಲು ಕೈಗೊಂಡ ಅಗತ್ಯವಾದ ಕ್ರಮಗಳು ಆರ್ಥಿಕ ಕುಸಿತವನ್ನು ಉಂಟು ಮಾಡಿರುತ್ತದೆ. ಕೋವಿಡ್–19 ಸಂಕ್ರಾಮಿಕ ಬಿಕ್ಕಟ್ಟಿನ ನಂತರದ ಚೇತರಿಕೆ ಅಂತರ್ಗತ ಮತ್ತು ಸುಸ್ಥಿರವಾಗಿಸಲು, ಹಣಕಾಸು ಸೇರ್ಪಡೆ ನೀತಿಯು ಆದ್ಯತೆಯಾಗಿ ಮುಂದುವರಿಯುತ್ತದೆ. 2020–21ರಲ್ಲಿ ರಾಜ್ಯ ಸರ್ಕಾರದ ಬೆಂಬಲದೊಂದಿಗೆ ಎಲ್ಲಾ ವರ್ಗದ ಉದ್ಯಮಿಗಳಿಗಾಗಿ ರೂಪಿತವಾದ ನವೀಕೃತ ಶೇ.6ರ ಬಡ್ಡಿ ದರ ಸಾಲ ಯೋಜನೆಯು ಮುಂಬರುವ ಆರ್ಥಿಕ ವರ್ಷದಲ್ಲಿ ಹೆಚ್ಚಿನ ಮಂಜೂರಾತಿ ಹಾಗೂ ವಿತರಣೆಯ ಗುರಿ ಸಾಧಿಸಲು ಅನುಕೂಲವಾಗುವ ನಿರೀಕ್ಷೆಯಿದೆ.

**2021–22 ಕ್ಕೆ ಗುರಿ :**

2021–22ರಲ್ಲಿ ಈ ಕೆಳಗಿನ ವ್ಯವಹಾರವನ್ನು ಸಾಧಿಸುವ ಗುರಿಯನ್ನು ಸಂಸ್ಥೆಯು ಇರಿಸಿಕೊಂಡಿದೆ.

| | |
|---|---|
| ಮಂಜೂರಾತಿ | 700.00 ಕೋಟಿ ರೂ.ಗಳು |
| ವಿತರಣೆ | 600.00 ಕೋಟಿ ರೂ.ಗಳು |
| ವಸೂಲಾತಿ | 730.00* ಕೋಟಿ ರೂ.ಗಳು |

(*315.00 ಕೋಟಿ ರೂ.ಗಳ ಬಡ್ಡಿ ವಸೂಲಾತಿ ಒಳಗೊಂಡಂತೆ)

ಸಂಸ್ಥೆಯ ಕೆಲಸ ಕಾರ್ಯಗಳಿಂದ ಉತ್ತಮ ಪರಿಣಾಮ ಹೊರಹೊಮ್ಮುವ ರೀತಿಯಲ್ಲಿ ಸಂಯೋಜಿತ ಪ್ರಯತ್ನಗಳನ್ನು ಮಾಡಲಾಗುವುದು.

**ಕೃತಜ್ಞತೆಗಳು:**

ಕರ್ನಾಟಕ ಸರ್ಕಾರವು ಸಂಸ್ಥೆಗೆ ಈಕ್ವಿಟಿ ನೆರವಿನ ಬೆಂಬಲ, ಬಡ್ಡಿ ಸಹಾಯಧನ ಬೆಂಬಲ ಹಾಗೂ ಸಣ್ಣ ಪ್ರಮಾಣದ ಸಾಲದ ಖಾತೆಗಳನ್ನು ಮುಕ್ತಾಯಗೊಳಿಸಲು ಬೆಂಬಲ ನೀಡಿದ್ದಕ್ಕಾಗಿ ನನ್ನ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸಂಸ್ಥೆಯ ಕಾರ್ಯಾಚರಣೆಯ ಪ್ರತಿಯೊಂದು ಹಂತದಲ್ಲೂ ಸಹಾಯ ಮತ್ತು ಮಾರ್ಗದರ್ಶನ ನೀಡಿದ್ದಕ್ಕಾಗಿ ಭಾರತೀಯ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್, ಭಾರತೀಯ ರಿಸರ್ವ ಬ್ಯಾಂಕ್, ಭಾರತ ಸರ್ಕಾರ, ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಈ–ಗವರ್ನೆನ್ಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳ ನಿರಂತರ ಬೆಂಬಲ ಹಾಗೂ ಮಾರ್ಗದರ್ಶನಕ್ಕಾಗಿ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಭಾರತೀಯ ಜೀವವಿಮಾ ನಿಗಮ, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್, ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ, ಹೆಚ್.ಡಿ.ಎಫ್.ಸಿ ಬ್ಯಾಂಕ್, ಎಸ್.ಬಿ.ಐ ಜೀವವಿಮಾ ಕಂ.ಲಿ., ಇಫ್ಕೋ–ಟೋಕಿಯೋ ಇನ್ಸೂರೆನ್ಸ್ ಕಂಪನಿ ಮತ್ತು ಕೈಗಾರಿಕಾ ಸಂಘ ಸಂಸ್ಥೆಗಳಾದ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ, ಅವೇಕ್, ಈ–ಮರ್ಜ್, ಭಾರತದ ಮಹಿಳಾ ಉದ್ಯಮಿಗಳ ಒಕ್ಕೂಟ, ಕಾನ್‌ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಮುಂತಾದುವುಗಳಿಗೂ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ವಾಣಿಜ್ಯ ಬ್ಯಾಂಕುಗಳು, ಅಫೆಕ್ಸ್ ಬ್ಯಾಂಕ್, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮ, ಕರ್ನಾಟಕ ಕೈಗಾರಿಕಾ ವಲಯ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ವಿಶ್ವೇಶ್ವರಯ್ಯ ವಾಣಿಜ್ಯ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ, (NSIC), MSME-DI ಅಭಿವೃದ್ಧಿ ಸಂಸ್ಥೆ, ಕರ್ನಾಟಕ ಉದ್ಯೋಗ ಮಿತ್ರ ಅವರ ಸಹಕಾರಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ನಿರ್ದೇಶಕರುಗಳಾಗಿದ್ದು ತಮ್ಮ ಸ್ಥಾನಗಳಿಂದ ನಿರ್ಗಮಿಸುತ್ತಿರುವ ಶ್ರೀ ವಿ.ಚಂದ್ರಮೌಳಿ, ಶ್ರೀ ಕೆ.ಶ್ರೀನಿವಾಸ್ ರಾವ್ ಮತ್ತು ಶ್ರೀ ಜೆ.ಜಗದೀಶ್, ಅವರುಗಳು ತಮ್ಮ ಸೇವಾವಧಿಯಲ್ಲಿ ಸಲ್ಲಿಸಿದ ಸೇವೆಗಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಸಂಸ್ಥೆಯಿಂದ ನೆರವು ಪಡೆದಿರುವ ಎಲ್ಲಾ ಉದ್ದಿಮೆದಾರರು, ಸಂಸ್ಥೆಯ ಷೇರುದಾರರು ನೀಡಿದ ನಿರಂತರ ಸಹಾಯ ಹಾಗೂ ಸಂಸ್ಥೆಯ ಬಾಂಡ್‌ಗಳಲ್ಲಿ ಹಣ ತೊಡಗಿಸಿರುವ ಹೂಡಿಕೆದಾರರಿಗೂ ನಿರ್ದೇಶಕರ ಮಂಡಳಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಇವರುಗಳು ಸಂಸ್ಥೆಗೆ ಸಕಾಲಕ್ಕೆ ಅವಧಿಸಾಲದ ನೆರವು ನೀಡಿರುವುದಕ್ಕೆ ವಿಶೇಷ ಕೃತಜ್ಞತೆ ಸಲ್ಲಿಸುತ್ತೇನೆ.

ಕೊನೆಯದಾಗಿ, ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ಪರಿಶ್ರಮಕ್ಕಾಗಿ ಹೃತ್ಪೂರ್ವಕ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ.

ವಂದನೆಗಳು,

**ಸ್ಥಳ : ಬೆಂಗಳೂರು** **ಸಹಿ/–**

**ದಿನಾಂಕ : 27ನೇ ಜುಲೈ 2021** **ಅಧ್ಯಕ್ಷರು**

# 7th COSIDICI National Award Function, Puducherry




Established in 1976, the Council of State Industrial Development and Investment Corporations of India (COSIDICI) is a national federation of state level financial and investment corporations comprising State Financial Corporations (SFCs) & State Industrial Development Corporations (SIDCs) etc.

COSIDICI National Awards have been instituted to recognize outstanding and meritorious performance in the activities connected with development of industries. These awards promote the spirit of competition amongst entrepreneurs and recognize their distinct role in socio-economic development. They seek to honour entrepreneurs who have brought prosperity to our country by setting up successful enterprises. The units being awarded have been chosen from all over the country and were selected by a jury formed by the Executive Committee of COSIDICI.

Six outstanding entrepreneurs assisted by Karnataka State Financial Corporation have received 7th COSIDICI National Award Function, Puducherry.

Sri Shivaprakash B.C., Executive Director represented KSFC and grace the 7th CONSIDICI National Award Function at Puducherry on 6th September 2021.




Sri Shivaprakash B.C., Executive Director, KSFC (2nd from Left) with KSFC's COSIDICI Awardees

# Brief Profile of COSIDICI Awardees of KSFC's Outstanding Entrepreneurs



MANJUNATH RESIDENCY

**Shri Shivappa J Mulagund,** BA
M/s Manjunath Residency
Hubli Road, Gadag-582101. Mob : 9448133320
mcpgadag@gmail.com

Good Quality tourist and Business Class Hotel
with Restaurant & conference hall




SAPTHAGIRI INDUSTRIES PRIVATE LIMITED

**Sri. O A Srinivasa Murthy**
M/s. Sapthagiri Industries Private Limited
Mob : +918050242369, svsproductskgl@gmail.com
Madhuvanahalli Villege & Post, Kollegal 571440,
Chamarajanagar District

Manufactures of Vermicelli, Spice Powders, Masalas,
Gram Flour, Ragi Flour and Soap nut powder.



EUREKA EXTRUSIONS AND FINISHERS

**Smt. Madhavilatha Jagadeesha,** B.Sc
M/s. Eureka Extrusions and Finishers
Kadakola, Mysore 571311, Mob : 9945700063 / 9611580063
madjags87@hotmail.com, jaggu164@hotmail.com

Manufacturers of Aluminium Extrusions




VISMITA COUNTY

**Smt. Latha Srinivas**
M/s. Vismita County
Marikatte Vastare Village, Chikmagalur 577 133
Mob : 7619302666, Vismita.county@gmail.com

Hill Side Resort




VGK HEART INSTITUTE

**Dr. Ajit Kulkarni,** M.B.B.S, MD, DM CARDIOLOGY
M/s.VGK HEART INSTITUTE
Mob : 9483280166, drajitvkulkarni@gmail.com
Azad Nagar, Raichur

Super Speciality Cardiac Hospital



AKSHAYA HOSPITAL

**Dr. Seema N** M.B.B.S, D.G.O.,
M/s. Akshaya Hospital
Mob : 9739471012/08192-242999, drseemanagaraja@gmail.com
Sri Siddeshwara Grand, Shimoga Road, Harihar -577601

30 Bed, Multi Specialty Hospital

# ಸಂಸ್ಥೆಯ ವಜ್ರಮಹೋತ್ಸವದ ಆಚರಣೆ





ವಜ್ರಮಹೋತ್ಸವ ಸಮಾರಂಭವನ್ನು ಜನವರಿ 30, 2021 ರಂದು ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಅಯೋಜಿಸಲಾಗಿತ್ತು.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ.ಬಿ.ಎಸ್.ಯಡಿಯೂರಪ್ಪ, ಕರ್ನಾಟಕ ಸರ್ಕಾರ ಇವರು ವಜ್ರಮಹೋತ್ಸವದ ಸ್ಮರಣ ಸಂಚಿಕೆ "Triumphant Sixty" ಯನ್ನು ಬಿಡುಗಡೆ ಮಾಡಿದರು. ಸನ್ಮಾನ್ಯ ಉಪಮುಖ್ಯಮಂತ್ರಿಗಳಾದ ಡಾ:ಅಶ್ವಥನಾರಾಯಣ.ಸಿ.ಎನ್ ಹಾಗೂ ಸನ್ಮಾನ್ಯ ಶಿಕ್ಷಣ ಸಚಿವರು ಶ್ರೀ.ಎಸ್.ಸುರೇಶ್‌ಕುಮಾರ್ ಉಪಸ್ಥಿತರಿದ್ದರು.

ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಸಂಸ್ಥೆಯ ಹೊಸ ವಿನ್ಯಾಸೀಕೃತ ಜಾಲತಾಣ (Website) ವನ್ನು ಅನಾವರಣಗೊಳಿಸಲಾಯಿತು. ಹೊಸ ವಿನ್ಯಾಸೀಕೃತ ಜಾಲತಾಣದಲ್ಲಿ ಸಂಸ್ಥೆಯ ಹಣಕಾಸು ಉತ್ಪನ್ನಗಳು, ಶಾಖಾ ಕಛೇರಿಗಳ ವಿವರ ಮತ್ತು ವಿಳಾಸ, ಸಂಸ್ಥೆಯು ಮಹಿಳೆಯರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ, ಹಿಂದುಳಿದ ವರ್ಗಗಳ ಉದ್ಯಮಿಗಳಿಗೆ ಲಭ್ಯವಿರುವ ವಿಶೇಷ ಸಾಲ ಯೋಜನೆಗಳ ವಿವರಗಳನ್ನು ಹಾಗೂ ಸಂಸ್ಥೆಯ ಕಾರ್ಯಾಚರಣೆಯ ನೀತಿಗಳು ಗ್ರಾಹಕರ ಮಾಹಿತಿಗಾಗಿ ಲಭ್ಯವಿದೆ.

ಈ ಸುಸಂದರ್ಭದಲ್ಲಿ ಶ್ರೀ.ಐ.ಎಸ್.ಎನ್.ಪ್ರಸಾದ್, ಭಾ.ಆ.ಸೇ., ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಧ್ಯಕ್ಷರು, ಕ.ರಾ.ಹ.ಸಂಸ್ಥೆ ಮತ್ತು ಡಾ.ಏಕ್‌ರೂಪ್ ಕೌರ್, ಭಾ.ಆ.ಸೇ., ಕಾರ್ಯದರ್ಶಿ (ಬಜೆಟ್ ಮತ್ತು ಸಂಪನ್ಮೂಲಗಳು) ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಹ.ಸಂಸ್ಥೆ, ಶ್ರೀ.ಬಿ.ಸಿ.ಶಿವಪ್ರಕಾಶ್, ಕಾರ್ಯನಿರ್ವಾಹಕ ನಿರ್ದೇಶಕರು, ಶ್ರೀ.ಜಿ.ವಿ.ಚಂದ್ರಕುಮಾರ್, ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಪ್ರಧಾನ ವ್ಯವಸ್ಥಾಪಕರುಗಳಾದ ಶ್ರೀ.ಶರದ್ ಜಿ ನಾಯಕ್, ಶ್ರೀ.ಉದಯಶಂಕರ್ ಎಸ್, ಶ್ರೀ.ಮೂರ್ತಿ ಎಂ.ಎ, ಶ್ರೀ.ವಿ.ನಾರಾಯಣಪ್ಪ ಹಾಗೂ ಶ್ರೀ.ವೆಂಕಟೇಶ್.ಎನ್ ರವರುಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು ಮತ್ತು ಉದ್ಯೋಗಿಗಳ ಸಂಘಗಳ ಅಧ್ಯಕ್ಷರುಗಳು ಸಹಾ ವಜ್ರಮಹೋತ್ಸವ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಕಾಫೀ ಟೇಬಲ್ ಪುಸ್ತಕ – "Triumphant Sixty" ಕ. ರಾ. ಹ. ಸಂಸ್ಥೆಯಿಂದ ಹಣಕಾಸು ನೆರವು ಪಡೆದು ಯಶ್ವಸಿಯಾದ ಘಟಕಗಳ ಸಂಕ್ಷಿಪ್ತ ವಿವರಗಳನ್ನು ಒಳಗೊಂಡಿದೆ. ವಜ್ರಮಹೋತ್ಸವದ ಸ್ಮರಣ ಸಂಚಿಕೆಯಲ್ಲಿ ಸಂಸ್ಥೆಯಿಂದ ಆರಂಭಿಕ ಹಣಕಾಸು ನೆರವು ಪಡೆದು ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯವಹಾರಿಕವಾಗಿ ಅಭಿವೃದ್ಧಿ ಹೊಂದಿದ್ದ ರಾಜ್ಯದ ಪ್ರತಿಷ್ಠಿತ ಸಂಸ್ಥೆಗಳಾದ ಇನ್‌ಫೋಸಿಸ್, ಬಯೋಕಾನ್, ಸನ್‌ಸೇರಾ ಇಂಜಿನಿಯರಿಂಗ್, ಸುಪ್ರಜೀತ್ ಇಂಜಿನಿಯರಿಂಗ್, ಎಂ.ಟಿ.ಅರ್, ವಿ.ಆರ್.ಎಲ್, ರಮಣಶ್ರೀ ಹೋಟೆಲ್ ಮತ್ತು ರೆಸಾರ್ಟ, ನಾರಾಯಣ ನೇತ್ರಾಲಯ, ಜೆ.ಎಸ್.ಎಸ್. ವಿದ್ಯಾಸಂಸ್ಥೆ, ಎನ್.ರಂಗಾರಾವ್ ಅಂಡ್ ಸನ್ಸ್, ಮೈಸೂರು, ಅಳ್ವಾ ಗ್ರೂಪ್, ಮಂಗಳೂರು, ಬೆಮ್ಕೋ ಹೈಡ್ರಾಲಿಕ್ಸ್ ಲಿಮಿಟೆಡ್, ಬೆಳಗಾವಿ ಹಾಗೂ ಮುದ್ರೆಮನೆ ಕಾಫಿ ಮತ್ತು ಸ್ಪೈಸಿಸ್, ಚಿಕ್ಕಮಗಳೂರು ಹಾಗೂ ಇತರೇ ಪ್ರತಿಷ್ಠಿತ ಸಂಸ್ಥೆಗಳ ವಿವರಗಳು ಲಭ್ಯವಿದೆ.



ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪರವರು ವಜ್ರಮಹೋತ್ಸವ ಸಂಭ್ರಮದ ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿದರು

# ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

# ಆಕರ್ಷಕ ಬಡ್ಡಿದರದಲ್ಲಿ ವಿಶೇಷ ಯೋಜನೆಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

**ಶೇ: 4% ಬಡ್ಡಿದರ – ಪರಿಶಿಷ್ಟ ಜಾತಿ (ಎಸ್.ಸಿ.) / ಪರಿಶಿಷ್ಟ ಪಂಗಡಗಳ (ಎಸ್.ಟಿ) ಉದ್ಯಮಿಗಳಿಗೆ ರೂ.10.00 ಲಕ್ಷದಿಂದ 10.00 ಕೋಟಿ ರೂ. ವರೆಗೆ ನಿವ್ವಳ ಬಡ್ಡಿದರ ಸಹಾಯಧನ ಯೋಜನೆ:–**

ಆಹಾರ ಸಂಸ್ಕರಣೆ, ಜವಳಿ, ಸಿದ್ದ ಉಡುಪು, ಸಾಫ್ಟ್‌ವೇರ್, ಎಂಜಿನಿಯರಿಂಗ್, ಇತರೆ ಕೈಗಾರಿಕಾ ಉತ್ಪಾದನಾ ಘಟಕಗಳು, ಕೈಗಾರಿಕಾ ಸಂಕೀರ್ಣ, ವಾಣಿಜ್ಯ ಸಂಕೀರ್ಣ, ವಸತಿ ಅಪಾರ್ಟ್‌ಮೆಂಟ್, ವಸತಿ ನಿವೇಶನ ವಲಯ ಅಭಿವೃದ್ಧಿ, ಕಲ್ಯಾಣ ಮಂಟಪ ಮತ್ತು ಸಭಾಂಗಣ, ಹೋಟೆಲ್, ಉಪಹಾರ ಗೃಹಗಳು, ರೆಸಾರ್ಟ್, ರಸ್ತೆ ಬದಿಯ ಅತಿಥಿಗೃಹಗಳು, ಆಸ್ಪತ್ರೆ, ನರ್ಸಿಂಗ್ ಹೋಮ್, ವೈದ್ಯಕೀಯ ಚಿಕಿತ್ಸಾಲಯಗಳು, ವೈದ್ಯಕೀಯ ಪ್ರಯೋಗಾಲಯ, ವೇರ್‌ಹೌಸ್, ಗೋದಾಮು, ಶೀತಲೀಕರಣ (ಕೋಲ್ಡ್‌ಸ್ಟೋರೇಜ್), ಇತ್ಯಾದಿ ಹಾಗೂ ದುಡಿಮೆ ಬಂಡವಾಳಕ್ಕಾಗಿ ಅವಧಿ ಸಾಲ ಸೌಲಭ್ಯ.

**ಶೇ: 6% ಬಡ್ಡಿದರ – ಎಲ್ಲಾ ವರ್ಗದ ಉದ್ಯಮಿಗಳಿಗೆ ರೂ.5.00 ಲಕ್ಷದಿಂದ 5.00 ಕೋಟಿ ರೂ. ವರೆಗೆ ನಿವ್ವಳ ಬಡ್ಡಿದರ ಸಹಾಯಧನ ಯೋಜನೆ:–**

ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಉತ್ಪಾದನಾ ಘಟಕಗಳಿಗೆ ಹಾಗೂ ಉತ್ಪಾದನೆಗೆ ಪೂರಕವಾಗಿ ಸೇವಾ ಚಟುವಟಿಕೆಗಳಲ್ಲಿ ತೊಡಗುವ ಘಟಕಗಳಿಗೆ ಬಡ್ಡಿ ಸಹಾಯಧನ ಯೋಜನೆ.

**ಶೇ: 12% ಬಡ್ಡಿದರ – ಸಾಮಾನ್ಯ ಯೋಜನೆಯಡಿಯಲ್ಲಿ ರೂ.5.00 ಲಕ್ಷದಿಂದ ರೂ.20.00 ಕೋಟಿವರೆಗೆ ಸಾಲ ಯೋಜನೆ:–**

ಕೈಗಾರಿಕೆಗಳಿಗೆ ಮತ್ತು ಕೈಗಾರಿಕೇತರ ಚಟುವಟಿಕೆಗಳಾದ ಕೈಗಾರಿಕಾ ಸಂಕೀರ್ಣ, ಆಸ್ಪತ್ರೆ, ನರ್ಸಿಂಗ್ ಹೋಮ್, ಗೋದಾಮು, ಹೋಟೆಲ್, ಉಪಹಾರ ಗೃಹಗಳು, ರೆಸಾರ್ಟ್ ಇತ್ಯಾದಿಗಳಿಗೆ ಅವಧಿ ಸಾಲ ಲಭ್ಯವಿದೆ.

ಈ ವಿಶೇಷ ಯೋಜನೆಗಳಲ್ಲಿ ಕೆಐಎಡಿಬಿ / ಕೆಎಸ್ಎಸ್ಐಡಿಸಿ ಭೂಮಿ ಅಥವಾ ಶೆಡ್‌ಗಳ ಖರೀದಿ*, ಕಟ್ಟಡಗಳ ನಿರ್ಮಾಣ (ಕೈಗಾರಿಕಾ ಮತ್ತು ಇತರೆ) ಹಾಗೂ ಸ್ಥಳೀಯ / ಆಮದು ಯಂತ್ರೋಪಕರಣಗಳ ಖರೀದಿಗೆ ಅವಧಿ ಸಾಲ ಲಭ್ಯವಿದೆ. (* ಷರತ್ತುಗಳು ಅನ್ವಯಿಸುತ್ತದೆ)

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:


**ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ**
ಕೆಎಸ್ಎಫ್‌ಸಿ ಭವನ, 1/1, ತಿಮ್ಮಯ ರಸ್ತೆ,
ಬೆಂಗಳೂರು – 560 052.
ಶಾಖಾ ಕಛೇರಿಗಳು – ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ

ದೂರವಾಣಿ : 080-22263322

ಇ–ಮೇಲ್ : info@ksfc.in / bdcr@ksfc.co
ಜಾಲತಾಣ : ksfc.government.gov.in

# Started Ventures with KSFC's Financial Assistance



Infosys

Financial Assistance
₹ 30.00 Lakhs

Date of Assistance
30.08.1983

**N. R. NARAYANA MURTHY**
Co-Founder
Padma Vibhushan

Infosys Technologies Limited
Bengaluru



Biocon

Financial Assistance
₹1.68 Lakhs

Date of Assistance
16.11.1981

**Dr. Kiran Mazumdar Shaw**
Founder
Padma Bhushan

Biocon Limited Bengaluru



Maini

Financial Assistance
₹120.00 Lakhs

Date of Assistance
19.06.2002

**Chetan Kumar Maini**
Founder

Maini Group
(Reva Electric Car Company Limited)
Bengaluru



MTR

Financial Assistance
₹26.90 Lakhs

Date of Assistance
26.12.1991

**P Sadananda Maiya**
Founder

MTR Foods Bengaluru



Prestige Group

Financial Assistance
₹240.00 Lakhs

Date of Assistance
24.11.1998

**Irfan Razack**
CMD

Prestige Group Bengaluru




Brigade Group

Financial Assistance
₹30.00 Lakhs

Date of Assistance
09.10.2002

**M. R. Jaishankar**
Founder- CMD

Brigade Group Bengaluru



PNC Menon
Founder and Chairman

Financial Assistance
₹370.00 Lakhs

Date of Assistance
29.01.2001

Sobha Group Bengaluru



Sunder Raju
Founder &
Managing Director

Financial Assistance
₹240.00 Lakhs

Date of Assistance
04.05.2001

Atria Group Bengaluru



Dr. P. Dayananda Pai
Founder

Financial Assistance
₹800.00 Lakhs

Date of Assistance
14.08.2007

Century Real Estate Bengaluru



Chender K. Baljee
Founder

Financial Assistance
₹35.00 Lakhs

Date of Assistance
29.04.1991

Royal Orchid Hotels Bengaluru



Vijay Sankeshwar
Founder & Chairman

Financial Assistance
₹500.00 Lakhs

Date of Assistance
18.03.1998

VRL Group Hubballi



Veerendra Shadakshari
Chairperson

Financial Assistance
₹60.00 Lakhs

Date of Assistance
30.01.1990

RAMANASHREE Hotels & Resorts
Bengaluru



Jungle Lodge Resort

Financial Assistance
₹27.74 Lakhs

Date of Assistance
29.09.1982

Jungle Lodges & Resorts Mysuru



Arun Kumar Chordia
Director

Financial Assistance
₹16.50 Lakhs

Date of Assistance
29.05.1992

Medreich Limited Bengaluru



His Holiness Jagadguru
Sri Shivarathri Deshikendra
Mahaswamiji Sri Suttur Math

Financial Assistance
₹180.00 Lakhs

Date of Assistance
30.05.2000

JSS Group Mysuru



Shailish D Siroya
CEO & Managing Director

Financial Assistance
₹35.30 Lakhs

Date of Assistance
17.03.1992

Bal Pharma Limited Bengaluru



Vidya M. Murkumbi
Co-Founder & Chairperson

Financial Assistance
₹165.60 Lakhs

Date of Assistance
16.05.1996

Shree Renuka Sugars Group
Belagavi



Arun Kumar Pillai
Founder

Financial Assistance
₹147.00 Lakhs

Date of Assistance
10.10.1995

Strides Pharma Science Limited
Bengaluru



Dr. Mohan Alva
Founder and Chairman

ALVA'S

Financial Assistance
₹50.00 Lakhs

Date of Assistance
16.11.2000

Alva Group Mangaluru



Hanumanth Rao
Founder

Karanja Industries Private Limited

Financial Assistance
₹60.00 Lakhs

Date of Assistance
30.01.1986

Karanja Industries Private Limited
Bidar



Dr. K. Bhujang Shetty
Founder and Chairman

NARAYANA NETHRALAYA

Financial Assistance
₹90.00 Lakhs

Date of Assistance
30.07.1992

Narayana Nethralaya Bengaluru



Shrinivas G. Shirgurkar
Co-Founder

ACE DESIGNERS

Financial Assistance
₹16.00 Lakhs

Date of Assistance
25.03.1987

Ace Designers Limited Bengaluru



Dr. Ramprasad
Founder

ANAND DIAGNOSTIC LABORATORY
A Neuberg ASSOCIATE

Financial Assistance
₹9.00 Lakhs

Date of Assistance
10.12.1996

Anand Diagnostic Laboratory
Bengaluru



K. AJIT KUMAR RAI
Managing Director

Suprajit

Financial Assistance
₹2.00 Lakhs

Date of Assistance
27.11.1985

Suprajit Engineering Limited
Bengaluru



S. SEKHAR VASAN
Founder Chairman

SANSERA ideas@work

Financial Assistance
₹30.20 Lakhs

Date of Assistance
30.05.1994

Sansera Engineering Bengaluru



Vikram Sirur
Managing Director

miven

Financial Assistance
₹25.00 Lakhs

Date of Assistance
19.03.1991

Miven Mayfran Conveyors Pvt. Ltd,.
Hubballi



Mahendra B Khimji
Founder

KFELK

Financial Assistance
₹10.75 Lakhs

Date of Assistance
31.12.1977

BDK Alloys Private Limited
Hubballi



Mohan Ranga Rao

CYCLE PURE AGARBATHI

Financial Assistance
₹90.00 Lakhs

Date of Assistance
13.07.1997

N. Ranga Rao & Sons Pvt. Ltd. Group
Mysuru



Tilak Vikamshi
Co-Founder & CEO

MICROFINISH Pumps • Valves • Automation

Financial Assistance
₹5.80 Lakhs

Date of Assistance
30.12.1987

Microfinish Valves and Pumps
Hubballi



Dr. Chittatoor Doraiswamy
Nagarajan
Chairman and
Managing Director

MYPOL

Financial Assistance
₹425.00 Lakhs

Date of Assistance
10.03.2011

Mysore Polymers & Rubbers
Products Limited Mysuru




**Financial Assistance**
**₹10.00 Lakhs**

**Date of Assistance**
**20.12.1996**

**Bevahalli Gangappa Ramakrishnappa**
**Managing Director**

**Deccan Hydraulics Pvt. Ltd., Kolar**



**Financial Assistance**
**₹8.00 Lakhs**

**Date of Assistance**
**27.09.1984**

**S. Rudre Gowda**
**Vice-Chairman**

**Shanthala Group Shivamogga**



**Financial Assistance**
**₹10.00 Lakhs**

**Date of Assistance**
**28.8.1997**

**Muddegowda G. L.**
**Founder**

**Bharathi Group Hassan**



**Financial Assistance**
**₹25.00 Lakhs**

**Date of Assistance**
**14.01.1999**

**B. S. Santhosh**
**Founder**

**Mudremane Coffee and Spices Chikkamagalur**



**Financial Assistance**
**₹20.50 Lakhs**

**Date of Assistance**
**28.09.1993**

**Y. V. MADHUKAR JOIS**
**Managing Director**

**Malnad Alloy Castings Pvt.Ltd. Shivamogga**



**Financial Assistance**
**₹2.00 Lakhs**

**Date of Assistance**
**08.06.1983**

**Madan Mohan Mohta**
**Chairman**


**BEMCO Hydraulics Limited Belagavi**

# BEEJAY ENTERPRISES

B-10, Machhe Industrial Estate, Belagavi-590014,

Contact: **Mr. Basavaraj S Javali** (Proprietor) **+91 9845142428**

Beejay Enterprises is an Engineering industry, which is promoted by its proprietor Mr. Basavaraj Shrishailappa Javali in 1991 to supply the critical casting and machining components to OEM's which has grown into a leading manufacturer of Automotive, Engineering Machined Components and Hydraulic products. Company is having ISO-9001-2015 certification by TUV Nord. The first term loan taken from KSFC was Rs 1.25 Lakhs in the year 1991 and till date many term loans were taken and all are closed successfully.


Pic- Year 1991



Pic- Year 1997-2017


Pic- Year 2019

Beejay Enterprises is engaged in manufacturing products like Critical Machining of Ring Gears, Spindle, Carriers, and Hydraulic Power Chuck Spares like Soft Jaws, Covers, Plunger nuts, Draw Nuts, Motor Pumps, and also Automatic Sanitizer dispensers, Fitness equipment etc. for different application like Industrial, Automotive, Engineering, Agriculture and process industries. Now company has converted into Private Limited, and started exporting of components to marine industry. Our company is supported by KSFC Finance since last three decades and now we have set up with well-established machine shop with advanced inspection facilities. Our company has achieved several awards from the customers, small scale associations, and quality council of India.

Shri Basavaraj Shrishailappa Javali born in the year 1963 in Belgaum. Completed education B. Com & D.B.M. and Commenced M/s Beejay Enterprises and started his career as Entrepreneur in 1991 with one small lathe at Udyambag – Belgaum as self-employed in the name of Beejay Enterprises. He started the unit with investment of INR 50,000/- in 1991 and grown to INR 5.0 Crores of investment today, with the financial support from KSFC.

Developed several SPM Machines and Innovative solutions for some of the critical machining of components.


He is actively involved in the service of society, industrial fraternity of Belgaum & Karnataka. He has been shouldered following responsibilities in industry.


- President of Belgaum Chamber of Commerce & Industries, Belgaum
- President of Small-Scale Industries Association – Belgaum.
- President of Rotary club of Belgaum Mid town.
- Hon. Joint secretary of KASSIA Bangalore for the year 2014-15
- Vice President of KASSIA Bangalore for the year 2017-2018.
- President for KASSIA, Bangalore, Karnataka, India 2018-2019
- Advisory Committee Member of Vishveshwaraiah Technological University, Belgaum
- Chairman for the South INDIA MSME Summit, Joint Action Committee.


Mr. Basavaraj S Javali
Managing Director

**Robotic Automation Project is successfully installed for the OEM components.**





# ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉದ್ದಿಮೆದಾರರಿಗೆ ಶೇ. 4 ರ ಬಡ್ಡಿ ಸಹಾಯಧನ ಸಾಲ ಯೋಜನೆ



KSFC ತನ್ನ 62 ವರ್ಷಗಳ ಕಾರ್ಯಾಚರಣೆಯ ವಿವಿಧ ಸಾಲ ಯೋಜನೆಯಡಿಯಲ್ಲಿ 21,892 SC/ST ಉದ್ಯಮಿಗಳಿಗೆ 2,266.13 ಕೋಟಿ ರೂ.ಗಳ ಹಣಕಾಸು ನೆರವನ್ನು ಕರ್ನಾಟಕ ರಾಜ್ಯದಲ್ಲಿ ಉದ್ಯಮಿಗಳಿಗೆ ನೀಡಿದೆ.

SC/ST ಉದ್ಯಮಿಗಳಿಗಾಗಿ ಶೇ.4 ನಿವ್ವಳ ಬಡ್ಡಿದರ ಸಾಲ ಯೋಜನೆ : ಕೈಗಾರಿಕೆ, ಪ್ರವಾಸೋದ್ಯಮ, ಆರೋಗ್ಯ ಸೇವೆ ಹಾಗೂ ನಿರ್ಮಾಣ ಮತ್ತು ರಿಯಲ್ ಎಸ್ಟೇಟ್ ಕ್ಷೇತ್ರಗಳ ಘಟಕಗಳ ಸ್ಥಾಪನೆಗೆ ಹಣಕಾಸು ಸೌಲಭ್ಯವಿದೆ.

ಕರ್ನಾಟಕ ರಾಜ್ಯ ಸರ್ಕಾರದ ಪೂರಕ ಭದ್ರತಾ ನಿಧಿ ಯೋಜನೆ.

**ಉದ್ದೇಶ:**

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಉದ್ದಿಮೆದಾರರು ಅತಿ ಸಣ್ಣ/ ಸಣ್ಣ / ಸೇವಾಕ್ಷೇತ್ರದ ಉದ್ದಿಮೆಗಳ ಸ್ಥಾಪನೆಗೆ ಹಾಗೂ ಹಾಲಿ ಇರುವ ಘಟಕಗಳ ವಿಸ್ತರಣೆ/ ವೈವಿಧ್ದೀಕರಣ/ ಆಧುನೀಕರಣಗೊಳಿಸಲು ಪ್ರೋತ್ಸಾಹ ನೀಡುವುದು.

**ಬಡ್ಡಿದರ:** ಶೇ. 4ರ ಬಡ್ಡಿದರ ಅನ್ವಯಿಸುವುದು

**ಅರ್ಹತೆ:**

ಈ ಯೋಜನೆಯ ಪ್ರಯೋಜನ ಪಡೆಯಲು ಅರ್ಹ ಘಟಕದ ಪ್ರವರ್ತಕರೆಲ್ಲರೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು. ಘಟಕದ ಮಾಲೀಕತ್ವದಲ್ಲಿ/ ಪಾಲುದಾರರಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಉದ್ದಿಮೆದಾರರನ್ನು ಹೊರತುಪಡಿಸಿ ಬೇರೆಯವರಿದ್ದಲ್ಲಿ ಬಡ್ಡಿ ಸಹಾಯಧನ ಸೌಲಭ್ಯ ಪಡೆಯಲು ಅನರ್ಹರಾಗುತ್ತಾರೆ. ಅಲ್ಲದೆ ಅರ್ಹ ಘಟಕದ ಫಲಾನುಭವಿಗಳು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಥವಾ ಎರಡೂ ಜನಾಂಗಕ್ಕೆ ಸೇರಿದವರಾಗಿರಬಹುದು.

**ಸಾಲದ ಮೊತ್ತ:**

- ಈ ಯೋಜನೆಯಡಿಯಲ್ಲಿ ಸಂಸ್ಥೆಯಿಂದ ದೊರೆಯುವ ಕನಿಷ್ಠ ಸಾಲದ ಮೊತ್ತವು ರೂ. 10.00 ಲಕ್ಷಗಳಾಗಿರುತ್ತದೆ.
- ಯೋಜನಾ ಪ್ರಸ್ತಾವನೆಗೆ ಅನುಗುಣವಾಗಿ ಒಂದೇ ಬಾರಿಗೆ ದುಡಿಮೆ ಬಂಡವಾಳದ ಗರಿಷ್ಠ ಮಿತಿ ರೂ. 50.00 ಲಕ್ಷಗಳನ್ನು ಒಳಗೊಂಡಂತೆ ಸಂಸ್ಥೆಯಿಂದ ದೊರೆಯುವ ಗರಿಷ್ಠ ಸಾಲದ ಮೊತ್ತವು ರೂ. 1,000.00 ಲಕ್ಷಗಳಾಗಿರುತ್ತದೆ. ಅಲ್ಲದೆ, ಪುನ: ದುಡಿಮೆ ಬಂಡವಾಳದ ಅವಧಿ ಸಾಲವನ್ನು ಪಡೆಯಲು ಈ ಯೋಜನೆಯಲ್ಲಿ ಅವಕಾಶವಿರುವುದಿಲ್ಲ.
- ಈ ಯೋಜನೆಯಡಿ ಹೊಸ ಉದ್ದಿಮೆಗಳ ಸ್ಥಾಪನೆಗೆ ಅಥವಾ ಹಾಲಿ ಇರುವ ಘಟಕಗಳ ವಿಸ್ತರಣೆಗೆ/ವೈವಿಧ್ದೀಕರಣ/ ಆಧುನೀಕರಣಕ್ಕಾಗಿ ಒಂದಕ್ಕಿಂತ ಹೆಚ್ಚು ಬಾರಿ ಸಾಲವನ್ನು ಪಡೆಯಬಹುದಾಗಿದ್ದು, ಒಟ್ಟಾರೆ ಪಡೆಯಲಾದ ಸಾಲವು ಗರಿಷ್ಠ ಸಾಲದ ಮಿತಿಗಿಂತ ಹೆಚ್ಚಾಗಿರಬಾರದು.

**ಮರುಪಾವತಿಯ ಅವಧಿ:**

ರೂ.500.00 ಲಕ್ಷಗಳವರೆಗಿನ ಸಾಲಗಳಿಗೆ ವಿರಾಮಾವಧಿಯನ್ನು ಒಳಗೊಂಡಂತೆ 8 ವರ್ಷಗಳವರೆಗೆ ಮತ್ತು ರೂ. 500.00 ಲಕ್ಷಗಳಿಗಿಂತ ಮೇಲ್ಪಟ್ಟು ಹಾಗೂ ರೂ. 1,000.00 ಲಕ್ಷಗಳವರೆಗಿನ ಸಾಲಗಳಿಗೆ 10 ವರ್ಷಗಳವರೆಗಿನ ಮರುಪಾವತಿಯ ಅವಧಿಯನ್ನು ನಿಗದಿಪಡಿಸಲಾಗಿದೆ.

**ಇತರೆ:**

- ಕರ್ನಾಟಕ ಸರ್ಕಾರ/ ಭಾರತ ಸರ್ಕಾರದ ಯಾವುದೇ ಯೋಜನೆಯಡಿ ಘತಕಗಳು ಈಗಾಗಲೇ ಬಡ್ಡಿ ಸಹಾಯಧನ ಸೌಲಭ್ಯ ಪಡೆದುಕೊಂಡಿದ್ದಲ್ಲಿ ಅಂತಹ ಘಟಕಗಳು ಪುನ: ಈ ಯೋಜನೆಯಡಿಯಲ್ಲಿ ಬಡ್ಡಿ ಸಹಾಯಧನ ಪ್ರಯೋಜನ ಪಡೆಯಲು ಅನರ್ಹರಾಗಿರುತ್ತಾರೆ;
- ಸಂಸ್ಥೆಯ ಸಾಲ ಮೊತ್ತದ ಮರುಪಾವತಿಯಲ್ಲಿ ಸುಸ್ತಿದಾರರಾದಲ್ಲಿ, ಫಲಾನುಭವಿಗಳು ಈ ಯೋಜನೆಯ ಪ್ರಯೋಜನ ಪಡೆಯಲು ಅನರ್ಹರಾಗಿರುತ್ತಾರೆ.
- ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಎಷ್ಟೇ ಮೊತ್ತದ ಯೋಜನಾ ವೆಚ್ಚವನ್ನು ಪರಿಗಣಿಸುವ ಸ್ವಾತಂತ್ರ್ಯವನ್ನು ಹೊಂದಿರುತ್ತದೆ. ಆದಾಗ್ಯೂ, ಬಡ್ಡಿ ಸಹಾಯಧನವನ್ನು ರೂ.1,000.00 ಲಕ್ಷಗಳ ಸಾಲದ ಮೊತ್ತಕ್ಕೆ ಸೀಮಿತಗೊಳಿಸಲಾಗಿದೆ. ಸಾಲದ ಮೊತ್ತವು ರೂ.1,000.00 ಲಕ್ಷಗಳಿಗಿಂತಲೂ ಹೆಚ್ಚಾಗಿದ್ದಲ್ಲಿ, ರೂ. 1,000.00 ಲಕ್ಷಗಳ ಮೇಲ್ಪಟ್ಟ ಸಾಲದ ಮೊತ್ತಕ್ಕೆ ಸಂಬಂಧಿಸಿದಂತೆ ಸಂಸ್ಥೆಯು ವಿಧಿಸುವ ಬಡ್ಡಿಯನ್ನು ಪ್ರವರ್ತಕರೇ ಭರಿಸಬೇಕಾಗುತ್ತದೆ.
- ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಸಾಮಾನ್ಯ ಬಡ್ಡಿ ದರದ ಆಧಾರದ ಮೇಲೆ ಸಾಲ ಮಂಜೂರು ಮಾಡುತ್ತದೆ. ಫಲಾನುಭವಿಗಳು ಈ ಯೋಜನೆಯಡಿ ಎಲ್ಲಾ ಪ್ರಕರಣಗಳಲ್ಲೂ ಪಾವತಿಸಲೇಬೇಕಾದ ಬಡ್ಡಿ ದರ ಶೇ.4 ರಷ್ಟು ಮಾತ್ರ. ಇವುಗಳಲ್ಲಿನ ವ್ಯತ್ಯಾಸದ ಬಡ್ಡಿಯನ್ನು ಬಡ್ಡಿ ಸಹಾಯಧನದ ರೂಪದಲ್ಲಿ ಕರ್ನಾಟಕ ಸರ್ಕಾರವು ಸಂಸ್ಥೆಗೆ ಭರಿಸುತ್ತದೆ.

# ನವೀಕೃತ ಶೇ.6ರ ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಉತ್ಪಾದನಾ ಘಟಕಗಳಿಗೆ ಹಾಗೂ ಉತ್ಪಾದನೆಗೆ ಪೂರಕವಾದ ಸೇವಾ ಚಟುವಟಿಕೆಗಳಲ್ಲಿ ತೊಡಗುವ ಘಟಕಗಳಿಗೆ  ಬಡ್ಡಿ ಸಹಾಯಧನ ಯೋಜನೆ:



**KSFC ತನ್ನ 62 ವರ್ಷಗಳ ಕಾರ್ಯಾಚರಣೆಯಲ್ಲಿ 11,545.36 ಕೋಟಿ ರೂ.ಗಳ ಹಣಕಾಸು ನೆರವನ್ನು ನೀಡಿ 1,16,177 ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಘಟಕಗಳನ್ನು ರಾಜ್ಯದಲ್ಲಿ ಸ್ಥಾಪಿಸಲಾಗಿದೆ.**

**ಶೇ.5.5. ನಿವ್ವಳ ಬಡ್ಡಿ ಸಹಾಯಧನ ಯೋಜನೆ** – ಸೂಕ್ಷ್ಮ ಹಾಗೂ ಸಣ್ಣ ಕೈಗಾರಿಕಾ ಘಟಕಗಳ ಸ್ಥಾಪನೆ ಹಾಗೂ ಹಾಲಿ ಸೂಕ್ಷ್ಮ ಹಾಗೂ ಸಣ್ಣ ಕೈಗಾರಿಕಾ ಘಟಕಗಳ ಆಧುನೀಕರಣ / ವೈವಿಧ್ಯೀಕರಣ / ತಂತ್ರಜ್ಞಾನ ಉನ್ನತೀಕರಣಕ್ಕಾಗಿ ಹಣಕಾಸು ಸೌಲಭ್ಯವಿದೆ.

### ಉದ್ದೇಶ:

ಕರ್ನಾಟಕ ಸರ್ಕಾರವು ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಉದ್ಯಮಗಳು ಸಮಂಜಸವಾದ ಬಡ್ಡಿದರದಲ್ಲಿ ಸಾಂಸ್ಥಿಕ ಸಾಲವನ್ನು ಪಡೆಯಲು ಎದುರಿಸುತ್ತಿರುವ ತೊಂದರೆಗಳನ್ನು ಪರಿಗಣಿಸಿ ರಾಜ್ಯದ ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಉದ್ಯಮಗಳಿಗೆ ಬಡ್ಡಿ ಸಹಾಯಧನ ಯೋಜನೆಯನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ 1ನೇ ಅಕ್ಟೋಬರ್ 2018 ರಿಂದ ಅನ್ವಯವಾಗುವಂತೆ ಜಾರಿಗೊಳಿಸಿದೆ. ತದನಂತರ ಆರ್ಥಿಕ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಅನುಕೂಲವಾಗುವಂತೆ 2020-21ರಲ್ಲಿ ಸೂಕ್ತವಾಗಿ ಮಾರ್ಪಡಿಸಲಾಯಿತು.

### ಅರ್ಹತೆ:

- ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವ ಏಕಸ್ವಾಮ್ಯ, ಪಾಲಿದಾರಿಕೆ, ಕಂಪನಿ ಮತ್ತು ಇತರೆ ಕಾನೂನಾತ್ಮಕ ಸಂಸ್ಥೆಗಳು.
- ಯೋಜನೆಯು ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಹೊಸ ಉತ್ಪಾದನಾ ಘಟಕಗಳಿಗೆ ಹಾಗೂ ಅಸ್ತಿತ್ವದಲ್ಲಿರುವ ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಘಟಕಗಳ ವಿಸ್ತರಣೆ/ ಆಧುನಿಕರಣ/ವೈರುದ್ಧೀಕರಣ/ತಾಂತ್ರಿಕ ಉನ್ನತೀಕರಣಕ್ಕೆ ನೇರವಾಗಿ ಉತ್ಪಾದನೆಗೆ ತೊಡಗಿಸುವ ಕಟ್ಟಡ ಹಾಗೂ ಯಂತ್ರೋಪಕರಣಗಳ (*Gross Block ಪರಿಗಣಿಸಿ) ಹೊಸ ಹೂಡಿಕೆಗೆ ಅನ್ವಯಿಸುತ್ತದೆ.
- ಈ ಯೋಜನೆಯಡಿಯಲ್ಲಿ ಕೆ.ಐ.ಎ.ಡಿ.ಬಿ / ಕೆ.ಎಸ್.ಎಸ್.ಐ.ಡಿ.ಸಿ ಸಂಸ್ಥೆಗಳಿಂದ (KIADB/KSSIDC) ಹಾಗೂ ಇತರೆ ಸರ್ಕಾರದ ಸ್ವಾಮ್ಯದ ಭೂಮಿ ಖರೀದಿಗೆ ಅನ್ವಯಿಸುವುದಿಲ್ಲ.
- ಕರ್ನಾಟಕ ಸರ್ಕಾರ/ ಭಾರತ ಸರ್ಕಾರದ ಯಾವುದೇ ಯೋಜನೆಯಡಿ ಘತಕಗಳು ಈಗಾಗಲೇ ಬಡ್ಡಿ ಸಹಾಯಧನ ಸೌಲಭ್ಯ ಪಡೆದುಕೊಂಡಿದ್ದಲ್ಲಿ ಅಂತಹ ಘಟಕಗಳು ಪುನ: ಈ ಯೋಜನೆಯಡಿಯಲ್ಲಿ ಬಡ್ಡಿ ಸಹಾಯಧನ ಪ್ರಯೋಜನ ಪಡೆಯಲು ಅನರ್ಹರಾಗಿರುತ್ತಾರೆ.
- ಸಾಲ ವಿತರಣೆಯಾದ ದಿನಾಂಕದಿಂದ  5 ವರ್ಷಗಳ ಅವಧಿಗೆ ಮಾತ್ರ ಶೆ.6 ರ ಬಡ್ಡಿ ಸಹಾಯಧನವು ಲಭ್ಯವಿರುತ್ತದೆ (ಸಾಲ ಮರುಪಾವತಿಯು 5 ವರ್ಷಕ್ಕಿಂತ ಹೆಚ್ಚಾದ್ದಲ್ಲಿ ಆ ಅವಧಿಗೆ ಸಂಸ್ಥೆಯಿಂದ ವಿಧಿಸುವ ಕರಾರು ಬಡ್ಡಿದರ ಅನ್ವಯಿಸುತ್ತದೆ.)

### ಸಾಲದ ಮೊತ್ತ:

- ಕನಿಷ್ಟ ಸಾಲದ ಮೊತ್ತ ರೂ.5.00 ಲಕ್ಷ.
- ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಉತ್ಪಾದನಾ ಘಟಕಗಳಿಗೆ ಗರಿಷ್ಟ ರೂ.500.00 ಲಕ್ಷ.
- ಉತ್ಪಾದನೆಗೆ ಪೂರಕವಾದ ಸೇವಾ ಚಟುವಟಿಕೆಗಳಲ್ಲಿ ತೊಡಗಿರುವ ಘಟಕಗಳಿಗೆ ಗರಿಷ್ಟ ರೂ.200.00 ಲಕ್ಷ.
- ನೇರವಾಗಿ ಉತ್ಪಾದನೆಗೆ ತೊಡಗಿಸುವ ಕಟ್ಟಡ ಹಾಗೂ ಯಂತ್ರೋಪಕರಣಗಳ ಹೂಸ ಹೂಡಿಕೆಗಾಗಿ (*Gross Block) ಗರಿಷ್ಟ ಮಿತಿಯನ್ನು ದಾಟಿದ ಸಾಲದ ಮೇಲೆ ಚಾಲ್ತಿಯಲ್ಲಿರುವ ಕರಾರು ಬಡ್ಡಿದರ ಅನ್ವಯವಾಗುತ್ತದೆ.

### ಬಡ್ಡಿದರ :

- ಸಂಸ್ಥೆಯು ಚಾಲ್ತಿಯಲ್ಲಿರುವ ಕರಾರು ಬಡ್ಡಿ ದರ ಅನ್ವಯುವಾಗುವಂತೆಯೇ ಸಾಲವನ್ನು ಮಂಜೂರು ಮಾಡಲಿದ್ದು ಅದರಂತೆಯೇ ಪ್ರವರ್ತಕರು ಮರುಪಾವತಿ ಮಾಡಬೇಕಾಗುತ್ತದೆ ಫಲಾನುಭವಿಗಳು ನೀಡಬೇಕಾದ ನಿವ್ವಳ ಬಡ್ಡಿದರವು ಸಂಸ್ಥೆಯಿಂದ ವಿಧಿಸುವ ಕರಾರು ಬಡ್ಡಿದರ ಹಾಗೂ ಕರ್ನಾಟಕ ಸರ್ಕಾರದ ಶೇ. 6ರ ಬಡ್ಡಿ ಸಹಾಯಧನ ವ್ಯತ್ಯಾಸವಾಗಿರುತ್ತದೆ. (ವಿಳಂಬದ ಮರುಪಾವತಿಗೆ ರಿಯಾಯಿತಿ ಇರುವುದಿಲ್ಲ). ಈ ಯೋಜನೆಯಲ್ಲಿ ಸರ್ಕಾರದ

ಬಡ್ಡಿ ಸಹಾಯಧನ ಪಡೆಯಲು ಫಲಾನುಭವಿಗಳು ಸಂಸ್ಥೆಯ ಎಲ್ಲಾ ಸಾಲದ ಕಂತುಗಳನ್ನು ನಿಯಮಿತವಾಗಿ ಮರುಪಾವತಿ ಮಾಡುತ್ತಿರಬೇಕು.

**ನಿಬಂಧನೆ ಮತ್ತು ಷರತ್ತುಗಳು:**

ಉದ್ದಿಮೆದಾರರ ಬಂಡವಾಳ, ಈಕ್ವಿಟಿ ಅನುಪಾತ, ಅವಶ್ಯಕ ಭದ್ರತೆ, ಯೋಜನೆಯ ಕಾರ್ಯ ಸಾಧ್ಯತೆ ಇನ್ನಿತರೆ ನಿಬಂಧನೆಗಳು ಮತ್ತು ಷರತ್ತುಗಳು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಚಾಲ್ತಿಯಲ್ಲಿರುವ ಸಾಲ ನೀತಿಯಲ್ಲಿರುವಂತೆ ಅನ್ವಯಿಸುತ್ತದೆ.

**ಯೋಜನೆಗೆ ಅನರ್ಹ ಘಟಕಗಳು/ಚಟುವಟಿಕೆಗಳು:**


- ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಮತ್ತು ಮಹಿಳಾ ಉದ್ದಿಮೆದಾರರಿಂದ ಸ್ಥಾಪಿಸಲ್ಪಟ್ಟ ರಾಜ್ಯ ಸರ್ಕಾರದ / ಭಾರತ ಸರ್ಕಾರದ ಯೋಜನೆಗಳಡಿಯಲ್ಲಿ ಬಡ್ಡಿ ಸಹಾಯಧನ ಪಡೆದ ಘಟಕಗಳು.
- ಅನ್ಯ ಬ್ಯಾಂಕುಗಳು / ಅನ್ಯ ಬ್ಯಾಂಕಿಂಗ್ ಹಣಕಾಸು ಕಂಪನಿಗಳು / ಖಾಸಗಿ ಬಂಡವಾಳದಾರರಿಂದ ಪಡೆದ ಸಾಲ ಹಾಗೂ ಸಂಸ್ಥೆಯಿಂದ ಈಗಾಗಲೇ ಪಡೆದಿರುವ ಸಾಲಗಳ ಪರಿವರ್ತನೆಗಾಗಿ.
- ಎಲ್ಲಾ ಮೂಲ ಸೌಲಭ್ಯ ಯೋಜನೆಗಳು, ನಿರ್ಮಾಣ ರಿಯಲ್ ಎಸ್ಟೇಟ್ ಕ್ಷೇತ್ರ, ವ್ಯಾಪಾರ ಚಟುವಟಿಕೆಗಳು, ಕಲ್ಯಾಣ ಮಂಟಪ, ಹೋಟೆಲ್, ವಸತಿ ಹಾಗೂ ಉಪಹಾರ ಗೃಹಗಳು, ಹಾಸ್ಪಿಟಲ್, ನರ್ಸಿಂಗ್ ಹೋಮ್, ವಸತಿ ಮತ್ತು ವಾಣಿಜ್ಯ ಕಟ್ಟಡಗಳು.
- ವ್ಯವಹಾರ / ವ್ಯಾಪಾರ ಚಟುವಟಿಕೆಗಳು.
- ಸಿನಿಮಾ ಮಂದಿರಗಳು ಹಾಗೂ ಮಾಲ್‌ಗಳು
- ಸಾರಿಗೆ ವಾಹನಗಳು, ನಿರ್ಮಾಣ ಉಪಕರಣಗಳು.
- ಕರ್ನಾಟಕ ಕೈಗಾರಿಕಾ ನೀತಿ 2020–25 ಅನುಬಂಧ 2 ರಲ್ಲಿ ಅಥವಾ ಅನಂತರದ ಜಾರಿಯಲ್ಲಿರುವ ಕೈಗಾರಿಕಾ ನೀತಿಯಲ್ಲಿ ಪ್ರೋತ್ಸಾಹ ಧನ ಹಾಗೂ ರಿಯಾಯಿತಿಗಳಿಗೆ ಅನರ್ಹವಾದ ಕೈಗಾರಿಕಾ ಚುಟುವಟಿಕೆಗಳು / ಘಟಕಗಳು.
- ಮೇಲೆ ನಿರ್ದಿಷ್ಟವಾಗಿ ತಿಳಿಸಿಲ್ಲದ ಇನ್ನಿತರೆ ಉತ್ಪಾದನಾ ಹೊರತುಪಡಿಸಿದ ಚಟುವಟಿಕೆಗಳು.
- *Gross Block ಸ್ವಂತ ಸ್ವಾಧೀನ /ಬ್ಯಾಂಕ್/ಹಣಕಾಸು ಸಂಸ್ಥೆಗಳ ನೆರವಿನಿಂದ ಪಡೆದು ಪ್ರಸ್ತುತ ಹೊಂದಿರುವ ಎಲ್ಲಾ ಯಂತ್ರೋಪಕರಣಗಳ (ನೇರವಾಗಿ ಉತ್ಪಾದನೆಯಲ್ಲಿ ತೊಡಗಿರುವ) ಒಟ್ಟು ಮೂಲ ಖರೀದಿ/ಸರಕು/ಪಟ್ಟಿ ಮೌಲ್ಯ ಹಾಗೂ ಪ್ರಸ್ತುತ ಯೋಜನೆಯಡಿಯಲ್ಲಿ ಖರೀದಿಸಲು ಉದ್ದೇಶಿಸಿರುವ ಯಂತ್ರೋಪಕರಣಗಳು ಒಟ್ಟಾರೆ ರೂ.500.00 ಲಕ್ಷಗಳ ಮಿತಿಯನ್ನು ಒಳಗೊಂಡಿರಬೇಕು.

Continued from page no. 8...




Sri Shivaprakash B.C., Executive Director, KSFC (2nd from Left) with KSFC's COSIDICI Awardees

## Segmentwise Sanctions During Financial Year 2020 - 21




## Schemewise Sanctions During Financial Year 2020 - 21



*Registered with Registrar of News for India Under No. 36561/80*

Book - Post

*To,*

*If Undelivered please return to :*
***BD & CR Dept.***
**KARNATAKA STATE FINANCIAL CORPORATION**
KSFC Bhavana, Head Office, # 1/1, Thimmaiah Road, Bengaluru - 560 052

Printed & Published by : AGM, BD & CR on behalf of KSFC and Printed at Shree Aishwarya Prints, #4, 7th Main, Papaiah Garden, BSK 3rd Stage, Bengaluru - 560085. Ph : 080 - 26796319 | Email : ssap37@gmail.com | Web : www.shreeaishwaryaprints.com and Published from Karnataka State Financial Corporation, KSFC Bhavana, No. 1/1, Thimmaiah Road, Bengaluru - 560 052. Editor : AGM, BD & CR Ph : 080 - 22250135 | e-mail : bdcr@ksfc.co